

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 Issue : 266 Friday 04-07-2025 E-mail : maruti.b.hosamani76@gmail.com Page: 4 Price : Rs. 1/-


## ಸರಿಯಾದ ಸಮಯಕ್ಕೆ ಸಿಗದ ರೈತರ ಬೆಳೆ ವಿಮೆಗೆ–ಮೈಬೂಬಬಾಷಾ ಆಕ್ರೋಶ



**ಸಿಹಿ ಕಹಿ ಸುದ್ದಿ,**

**ವಿಜಯಪುರ :** ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದ ರ?ತರಿಗೆ 2023 ರಿಂದ 2024 ಸಾಲಿನ ಹಾಗೂ 2025 ನೇ. ಸಾಲಿನ ಬೆಳೆ ವಿಮೆ ಹಾಗೂ ಬೆಳೆ ಪರಿಹಾರ ಇಲ್ಲಿಯ ವರೆಗೂ ಯಾವ ರೈತರಿಗೂ ತಲುಪದೇ ಕಂಗಲಾಗಿದ್ದಾರೆ ರೈತ ಈ ದೇಶದ ಬೆನ್ನೆಲುಬು ಅಂತಾ ಅನೇಕ ರಾಜಕಾರಣಿಗಳು ಭಾಷಣದೂದ್ದಕ್ಕೂ ಮಾತಾಡುತ್ತಾರೆ ಆದ–ರೆ ಈ ದೇಶದಲ್ಲಿ ಅನ್ನ ಕೊಡುವ ರೈತರಿಗೆ ಬೆಲೆ ಇಲ್ಲದಂತೆ ಆಗಿದೆ ರೈತರು ಅಧಿಕಾರಿಗಳನ್ನು ಕೇಳಿದರೆ ಮೇಲಾಧಿಕಾರಿಗೆ ಕೇಳಿ ಎಂದು ಸಬೂಬು ಹೇಳುತ್ತಾರೆ. ದೇಶದ ಬೆನ್ನೆಲುಬು ಎಂದರೆ ರೈತ ಎಂದು ಅಧಿಕಾರಿಗಳು, ರಾಜಕಾರಣಿಗಳು ದೊಡ್ಡ ದೊಡ್ಡ ಭಾಷಣಗಳನ್ನು ಹೇಳುತ್ತಾರೆ ರೈತ ಬೆಳೆದರೆ ನಾವೆಲ್ಲಾ ಎಂದು ಭಾಷಣದಲ್ಲಿ ಹೇಳಿ ರೈತರನ್ನು ಅತೀ ಕೀಳಾಗಿ ನೋಡುವಂತ ದುರ್ಗುಣ ಅಧಿಕಾರಿಗಳು ರೈತರಿಗೆ ಸುಳ್ಳು ಆಶ್ವಾಸನೆ ನೀಡಿದ್ದಲ್ಲದೆ ತಾಲೂಕಿನ ರೈತ ಸಂಪರ್ಕ ಕೇಂದ್ರದಲ್ಲಿ ಎರಡರಿಂದ ಮೂರು ವರ್ಷಗಳ ಕಾಲ ಕಳೆದರು ರೈತರಿಗೆ ಬರುವಂತ ಸ್ಪ್ರಿಂಕ್ಲರ್ ಪೈಪುಗಳು ಮತ್ತು ಜಮೀನುಗಳಿಗೆ ಸಂಬಂದಿಸಿದ ಉಪಕರಣಗಳನ್ನು ಅಧಿಕಾರಿಗಳು ಇನ್ನೂ ಕೊಟ್ಟಿಲ್ಲಾ ರೈತರು ಹೋಗಿ ಕೇಳಿದಾಗ ಬರುತ್ತವೆ. ಬಂದ ಮೇಲೆ ಕೊಡುತ್ತೇವೆ ಎಂದು ಸಬೂಬ ಹೇಳುತ್ತಾ ಸುಳ್ಳು ಭರವಸೆಗಳನ್ನು ಕೊಡುತ್ತಾರೆ ಈಗಾಗಲೇ ಹತ್ತಾರು ಸಲ ಮನವಿಯನ್ನು ಕೊಟ್ಟರು ಅಧಿಕಾರಿಗಳು ಕ್ಯಾರೆ ಅನ್ನುತ್ತಿಲ್ಲಾ ತಕ್ಷಣ ಇದಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳು ಇವರ ಮೇಲೆ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಮುಂದಿನ ದಿನ ಮಾನದಲ್ಲಿ ತಾಳಿಕೋಟಿ ತಹಶೀಲ್ದಾರ್ ದಂಡಾಧಿಕಾರಿಗಳಿಗೆ ಆಫೀಸಿಗೆ ಹಾಗೂ ರೈತ ಸಂಪರ್ಕ ಕೇಂದ್ರಕ್ಕೆ ರೈತರು ಮುತ್ತಿಗೆ ಹಾಕುವ ಸಂದರ್ಭ ದೂರ ಉಳದಿಲ್ಲಾ ಎಂದು ರಾಷ್ಟ್ರೀಯ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಮೈಬೂಬಬಾಷ.ಮನಗೂಳಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ.ತಾಳಿಕೋಟೆ**

## ಸದ್ದಿಲ್ಲದೆ ಹಾಳಾಗುತ್ತಿರುವ ದೇಶದ ಆಸ್ತಿ ಯುವಕರು ಮಾದಕ ದ್ರವ್ಯಗಳ ಸೇವನೆಗೆ ಕಳವಳ ವ್ಯಕ್ತಪಡಿಸಿದ – ಡಾ, ವೈ.ಎಂ ಪೂಜಾರ ಬಿ.ಹೆಚ್.ಇ.ಓ

**ಸಿಹಿ ಕಹಿ ಸುದ್ದಿ,**

**ಲಚ್ಯಾಣ :** ಮಗು ಅಂಗಳದಲ್ಲಿ ಆಡುತ್ತ ಅಂಗನವಾಡಿಗೆ ಹೋಗಿ ಮನೆಗೆ ಬರುತ್ತದೆ ಬೆಳವಣಿಗೆ ಆದಂತೆ ಪ್ರಾಥಮಿಕ ಶಾಲೆಗೆ ಹೋಗುವ ಮಗು ಕಲಿಕೆಯ ಹಂತದಲ್ಲಿ ಅನುಕರಣೆಯಿಂದ ದುಶ್ಚಟಗಳಿಗೆ ದಾಸರಾದ ಹಿರಿಯರಿಂದ ಸ್ನೇಹಿತರಿಂದ ಮದುವೆ ಸಮಾರಂಭ ಇತರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವಾಗ. ಸಮೂಹ ಒತ್ತಡ ಮಧ್ಯದಲ್ಲಿ 10 ರಿಂದ 19 ವರ್ಷದ ಮಕ್ಕಳು ದುಶ್ಚಟಗಳಿಗೆ ದಾಸರಾಗುತ್ತಿದ್ದಾರೆ ಎಂದು ಹೇಳಿದರು. ಅವರು ಲಚ್ಯಾಣ ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿರುವ ಮಾದಕ ದ್ರವ್ಯ ಹಾವಳಿ ನಿಯಂತ್ರಣ ಅರಿವು ಕಾರ್ಯಕ್ರಮದಲ್ಲಿಸಸಿಗೆನೀರುಉಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ. ಅತ್ತ ಬಾಲ್ಯನು ಅಲ್ಲ ಇತ್ತ ಯೌವ್ವನನ್ನು ಅಲ್ಲ ಪ್ರೌಢಾವಸ್ಥೆಯಲ್ಲಿ ಯುವಕರು ದುಶ್ಚಟಗಳಿಗೆ ದಾಸರಾಗಿ





ಸದ್ದಿಲ್ಲದೆ ಹಾಳಾಗುತ್ತಿರುವುದು ಕುಟುಂಬ ಸಮಾಜ, ಗ್ರಾಮ, ರಾಜ್ಯ, ದೇಶಕ್ಕೆ ಗಂಡಾಂತರ ಸಮಸ್ಯೆ ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯ ಪ್ರಕಾರ 10 ರಿಂದ 15 ವರ್ಷದೊಳಗಿನ ಮಕ್ಕಳು ಶೇಕಡ 15 ರಷ್ಟು ಮಕ್ಕಳು ಪ್ರತಿ ಗ್ರಾಮಗಳಲ್ಲಿ ತಂಬಾಕು ಮೂಲ ಉತ್ಪನ್ನಗಳ ತಂಬಾಕು ಗುಟುಕ ಪಾನ್ ಬೀಡಿ ಸಿಗರೇಟ್ ಧೂಮಪಾನ ಸೇವನೆ ನಿರಂತರ ಡಿಜಿಟಲ್ ಮೊಬೈಲ್ ಬಳಕೆ ಇತ್ತ ನಗರ ಪಟ್ಟಣಗಳಲ್ಲಿ ಯುವಕರು ಪ್ರತಿಷ್ಠಿಗಾಗಿ ಡ್ರಗ್ಸ್ ಇಂಜಕ್ಷನ್ ನಶೆ ಅಫಿಮು, ಕೋಕಾ, ಗಾಂಜಾ,ಸೇವನೆ ಆರೋಗ್ಯ ಹದಗೆಡುತ್ತಿದೆ ಕ್ಯಾನ್ಸರ್ ಪೀಡಿತ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾ–ರೆ. ಕುಟುಂಬ ಮತ್ತು ದೇಶದ ಆರ್ಥಿಕ ವ್ಯವಸ್ಥೆ ಹಾಳಾಗುತ್ತಿದೆ ಶಿಕ್ಷಣದ ಜೊತೆಗೆ ಸಂಸ್ಕಾರ ಕೊಡುವ ಮೂಲಕ ಬದುಕು ರೂಪಿಸುವುದು ಅನಿವಾರ್ಯವಾಗಿದೆ ಶಾಲಾ ಕಾಲೇಜುಗಳಲ್ಲಿ ವಸತಿ ನಿಲಯಗಳ ಹತ್ತಿರದಲ್ಲಿರುವ ತಂಬಾಕು ಮೂಲ ಉತ್ಪನ್ನಗಳುಅಂಗಡಿಗಳುಮಧ್ಯಮಾರಾಟ ಅಂಗಡಿಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತಿವೆ ಮಕ್ಕಳು 4 ನೇ. ತರಗತಿಯಿಂದ ಪದವಿ ಪೂರ್ವ ಪಿಯುಸಿ ತನಕ ಮಕ್ಕಳ ಮನಸ್ಸು ಗೊಂದಲದ ಗೂಡಾಗಿರುತ್ತದೆ ಸಂಪೂರ್ಣವಾಗಿ ಸ್ನೇಹಿತರ ಮೇಲೆ ಅವಲಂಬನೆ ಸಹವಾಸದಿಂದ ಸನ್ಯಾಸಿ ಕೆಟ್ಟ ಹಾಗೆ ದುಶ್ಚಟ ಸ್ನೇಹಿತರು ಹಾಗೂ ದುಶ್ಚಟಗಳ ಪರಿಸರ ವಾತಾವರಣ ಮಕ್ಕಳು ದಾಸರಾಗುತ್ತಿದ್ದಾರೆ ಕುತೂಹಲ ಮಜಾ ಮಾಡೋಣ ಟೇಸ್ಟ್ ನೋಡೋಣ ಅವರು ಮಾಡುತ್ತಾರೆ ನಾವೇಕೆ ಮಾಡಬಾರದು ಪ್ರಾರಂಭಿಕ ಹಂತದ ಮನೋಭಾವನೆ ಗಳಿಂದ ಹಾಳಾಗುತ್ತಿರುವುದು ಆದ–ರೆ ಪಾಲಕರು ಉಪ ಜೀವನಕ್ಕಾಗಿ ಹೊಲ ಗದ್ದೆಗಳಲ್ಲಿ ದುಡಿಯುವ ವರ್ಗ ರೈತಾಪಿ ಕೂಲಿ ಮಾಡುವ ಮೂಲಕ ಜೀವನೋಪಾಯಕ್ಕಾಗಿಬದುಕುವಪಾಲಕ ಪೋಷಕರ ನಿಗಾವಣಿ ಕೊರತೆಯಿಂದ ಮಕ್ಕಳು ಹಾಳಾಗುತ್ತಿದ್ದಾರೆ ಎಂದು ಮಾರ್ಮಿಕವಾಗಿ ಮಾತನಾಡಿದರು.

ಎಂಎಫ್ ದರ್ಗಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು. ಮಾತನಾಡುತ್ತಾ ಬಾಲ್ಯ ವಿವಾಹಗಳು ತಡೆಗಟ್ಟಲು ಸಮುದಾಯದಲ್ಲಿ ಮೂಢನಂಬಿಕೆ ತಪ್ಪು ಕಲ್ಪನೆ ಹೋಗಲಾಡಿಸಲು ಅರಿವು ಕಾರ್ಯಕ್ರಮಗಳು ಹಮ್ಮಿಕೊಳ್ಳಲು ಸಂಘ ಸಂಸ್ಥೆಗಳು ಸಹಕಾರ ಮಾಡಬೇಕೆಂದು ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲರು ಅಧ್ಯಕ್ಷತೆ ವಹಿಸಿದರು ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## 2024 ನೇ. ವರ್ಷದ "ವಾರ್ಷಿಕ ಪ್ರಶಸ್ತಿ" ಗೆ ಸಿ.ಎಚ್ ಉಮೇಶ್ ನಾಯ್ಕ್ ಪುರಸ್ಕೃತರು

**ಸಿಹಿಕಹಿಸುದ್ದಿ,ಬೆಂಗಳೂರು:**ಕರ್ನಾಟಕಸರ್ಕಾರಬಂಜಾರ ಮತ್ತುಸಂಸ್ಕೃತಿಭಾಷಾಅಕಾಡೆಮಿವಾರ್ಷಿಕರಾಜ್ಯಪ್ರಶಸ್ತಿ ಪಡೆದ ಸಿ.ಎಚ್ ಉಮೇಶ್ ನಾಯಕ್ "ಚಿನ್ನ ಸಮುದ್ರ" ಜಾನಪದ ಕಲಾವಿದರು ದಾವಣಗೆರೆ ಜಿಲ್ಲೆ ಶ್ರೀಯುತರು 25/30 ವರ್ಷಗಳಿಂದ ಸತತವಾಗಿ ಜನಪದ ಗಾಯನ ಕ್ಷೇತ್ರದಲ್ಲಿ ಹಳ್ಳಿಹಳ್ಳಿಗೂ ಜಿಲ್ಲೆಗೂ ರಾಜ್ಯಕ್ಕೂ ಹಾಗೂ ರಾಷ್ಟ್ರ ಮಟ್ಟದಲ್ಲೂ ಕಂಪನ್ನು ಬೀರಿರುವ ಬಂಜಾರ ಜನಪದ ಕೋಗಿಲೆ ಎಂದೇ ಮತ್ತು ಜಾನಪದ ಗಾರುಡಿಗ ಎಂದೇ ಪ್ರಸಿದ್ಧಿ ಹೊಂದಿರುವ ಸಿ.ಎಚ್ ನಾಯಕ್ ಅವರು ಅವರ ಸಾಧನೆಯನ್ನು ಗುರುತಿಸಿ ಬಂಜಾರ ಸಂಸ್ಕೃತಿ ಭಾಷಾ ಅಕಾಡೆಮಿ ವತಿಯಿಂದ 2024/25 ನೇ. ಸಾಲಿನ ವಾರ್ಷಿಕ ರಾಜ್ಯ ಪ್ರಶಸ್ತಿಯನ್ನುಪ್ರಧಾನಮಾಡಲಾಗಿದೆ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿಗಳಾದ ಡಿ.ಕೆ ಶಿವಕುಮಾರ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ್ ತಂಗಡಗಿ ಮತ್ತು ಬಂಜಾರ ಸಂಸ್ಕೃತಿ ಭಾಷಾ ಅಕಾಡೆಮಿಯ ಅಧ್ಯಕ್ಷರಾದ ಡಾಕ್ಟರ್, ಎ.ಆರ್ ಗೋವಿಂದಸ್ವಾಮಿ ಅಕಾಡೆಮಿಯ ಸದಸ್ಯರುಗಳು






ಶುಭಹಾರೈಕೆತಿಳಿಸುತ್ತಾಮುಂಬರುವ ದಿನಗಳಲ್ಲಿ ಉನ್ನತ ಪ್ರಶಸ್ತಿಗಳನ್ನು ತನ್ನ ಮುಡಿಗೆ ಏರಿಸಲೆಂದು ಶುಭ ಹಾರೈಸುತ್ತಾ ದಲಿತ ಪರ ಹೋರಾಟ ಗೀತೆ ಜಾಗೃತಿ ಗೀತೆ ಕ್ರಾಂತಿ ಗೀತೆ, ಜನಪದಗೀತೆಎಲ್ಲಾಜಿಲ್ಲೆಯಾದ್ಯಂತ ಹಾಡಿ ಹೆಸರು ಮಾಡಿರುವ ಸಿ.ಎಚ್ ಉಮೇಶ್ ನಾಯಕ್ "ಚಿನ್ನ ಸಮುದ್ರ" ಇವರಿಗೆ ಬಂಜಾರ ಸಂಸ್ಕೃತಿ ಭಾಷಾ ಅಕಾಡೆಮಿಯ ಅಧ್ಯಕ್ಷರು ಡಾಕ್ಟರ್, ಎ.ಆರ್ ಗೋವಿಂದ್ ಸ್ವಾಮಿ ಶುಭ ಕೋರಿದ್ದಾರೆ ಎಂದು ವರದಿಯಾಗಿದೆ.

## ಮೈದುಂಬಿ ಪ್ರವಹಿಸುತ್ತಿರುವ ಘಟಪ್ರಭಾ– ನಂದಗಾಂವ ಸೇತುವೆ ಜಲಾವೃತ



**ಮಹಾಲಿಂಗಪುರ:** ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ಸುರಿಯುತ್ತಿರುವ ಭಾರೀ ಮಳೆಯ ಪರಿಣಾಮವಾಗಿ ಸಮೀಪದ ಢವಳೇಶ್ವರ ಗ್ರಾಮದ ಹತ್ತಿರ ಘಟಪ್ರಭಾ ನದಿಯು ಮೈದುಂಬಿ ಹರಿಯುತ್ತಿದೆ.

ನಂದಗಾಂವ ಸೇತುವೆ ಜಲಾವೃತ :

ಘಟಪ್ರಭೆಗೆ ಹೆಚ್ಚಿನ ನೀರು ಬರುತ್ತಿರುವ ಕಾರಣ ಬುಧವಾರ ಸಂಜೆಯಿಂದ ಸಮೀಪದ ನಂದಗಾಂವ–ಅವರಾದಿ ಸೇತುವೆ ಜಲಾವೃತವಾಗಿ ಮೂಡಲಗಿ ತಾಲ್ಲೂಕಿನ ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಮಿರ್ಜಿ ಗ್ರಾಮದ ಹಳೆಯ ಸೇತುವೆಯು ಜಲಾವೃತವಾಗಿದೆ.

ಘಟಪ್ರಭಾ ನದಿಗೆ 16 ಸಾವಿರ ಕ್ಯೂಸೆಕ್ ನೀರು :

ಮಹಾರಾಷ್ಟ್ರದಲ್ಲಿನ ಮಹಾಮಳೆಯ ಪರಿಣಾಮ ಹಿರಣ್ಯಕೇಶಿ ನದಿಯು ತುಂಬಿ ಹರಿಯುತ್ತಿದೆ. ಪರಿಣಾಮ ಗೋಕಾಕ ಹತ್ತಿರದ ಧುಪದಾಳ ಜಲಾಶಯಕ್ಕೆ 15,950 ಕ್ಯೂಸೆಕ್ ಒಳಹರಿವು ಇದ್ದು, ಅದರಲ್ಲಿ ಜಿಎಲ್ಬಿಸಿ ಎಡದಂಡೆ ಕಾಲುವೆಗೆ 2,400 ಕ್ಯೂಸೆಕ್ ಹಾಗೂ 13,890 ಕ್ಯೂಸೆಕ್ ನೀರನ್ನು ಘಟಪ್ರಭಾ ನದಿಗೆ ಹರಿಸಲಾಗುತ್ತಿದೆ. ಬಳ್ಳಾರಿನಾಲಾ 1,689, ಮಾರ್ಕೇಂಡೆಯ 15 ಸಾವಿರ ಕ್ಯೂಸೆಕ್ ಸೇ–ರಿದಂತೆ ಘಟಪ್ರಭಾ ನದಿಗೆ ಒಟ್ಟು 16,117 ಕ್ಯೂಸೆಕ್ ನೀರು ಹರಿದು ಬರುತ್ತಿದೆ.

ಅಪಾಯದ ಮಟ್ಟದಲ್ಲಿ ಢವಳೇಶ್ವರ ಸೇತುವೆ : ಸಮೀಪದ ಢವಳೇಶ್ವರ ಗ್ರಾಮದ ಸೇತುವೆ ಹತ್ತಿರ ಘಟಪ್ರಭಾ ನದಿಯು ಅಪಾಯದ ಮಟ್ಟದಲ್ಲಿ ಹ–ರಿಯುತ್ತಿದೆ.

ಸೇತುವೆ ಸಂಪೂರ್ಣ ಜಲಾವೃತವಾಗಲು ಕೇವಲ ಒಂದೆರಡು ಅಡಿ ಮಾತ್ರ ಬಾಕಿ ಉಳಿದಿದೆ.


## ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

**ರಬಕವಿ–ಬನಹಟ್ಟಿ :** ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯಿಂದಾಗಿ ಬೆಂಗಳೂರು ನಗರ ನಿರ್ಮಾಣಗೊಂಡಿತು. ಬೆಂಗಳೂರು ಪಟ್ಟಣದ ಅಭಿವೃದ್ಧಿಗೆ ಅವರು ಶ್ರಮಿಸಿದ್ದರು. ಬೆಂಗಳೂರು ಇಂದು ವಿಶ್ವ ಸಾಫ್ಟವೇರ್ ರಾಜಧಾನಿಯಾಗಿದೆ. ನೂರಾರು ಜನರಿಗೆ ಉದ್ಯೋಗ ಅವಕಾಶವನ್ನು ನೀಡಿದೆ. ಅಂಥ ಮಹಾನುಭಾವರ ದೂರದೃಷ್ಟಿಯನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಶುಕ್ರವಾರ ಇಲ್ಲಿನ ರಬಕವಿ–ಬನಹಟ್ಟಿತಹಶೀಲ್ದಾರ್‌ಕಾರ್ಯಾಲಯದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತ್ಯೋತ್ಸವದ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಬೆಂಗಳೂರು ಇಂದು ವಿಶ್ವದ ಗಮನವನ್ನು ತನ್ನೆಡೆಗೆ ಸೆಳೆಯುತ್ತಿದ್ದು, ನಮ್ಮೆಲ್ಲರ ಹೆಮ್ಮೆಯ ನಗರವಾಗಿದೆ. ಇದರ ಹಿಂದಿರುವ ಶಕ್ತಿ ನಾಡಪ್ರಭು ಕೆಂಪೇಗೌಡರದು. ನಮ್ಮ ಮಕ್ಕಳಿಗೆ ನಾಡಿನ ಸಂಸ್ಕೃತಿ, ಸಂಸ್ಕಾರ ಮತ್ತು ನಾಡಿನ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದವರ ಕು–ರಿತು ತಿಳಿ ಹೇಳಬೇಕು ಎಂದು ತಹಶೀಲ್ದಾರ್ ಸ್ವಾದಿ ತಿಳಿಸಿದರು.

ಶಿರಸ್ತೆದಾರ ರಾಜಶೇಖರ ಸಾತಿಹಾಳ, ಎಸ್. ಎಂ. ಕೂಗಾಟೆ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಸದಾಶಿವ ಕುಂಬಾರ, ರವಿ ಈಟಿ, ರವಿ ಹುಲ್ಲನ್ನವರ, ಚೇತನ ಭಜಂತ್ರಿ, ಮಹಾಂತೇಶ ಬದಾಮಿ, ಕಿಶೋರ ಸೋನೋನೆ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.



ರಬಕವಿ–ಬನಹಟ್ಟಿ ನಗರಸಭೆಯ ನೂತನ ಪೌರಾಯುಕ್ತರಾಗಿ ಆಗಮಿಸಿರುವ ರಮೇಶ ಜಾಧವ ಅವರನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಂದ ಸನ್ಮಾನಿಸಲಾಯಿತು.

## ನೇಕಾರರ ಅಭ್ಯುದಯಕ್ಕೆ ಪ್ರಾಮಾಣಿಕವಾಗಿ ಶ್ರಮಿಸುವೆ

**ಬನಹಟ್ಟಿ :** ರಾಜ್ಯದ ನೇಕಾರರ ಪರಿಸ್ಥಿತಿ ಚಿಂತಾಜನಕವಾಗಿದೆ. ನೇಕಾರ ಸಮುದಾಯದ ಆರ್ಥಿಕ ಸಬಲೀಕರಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷ ಕೀರ್ತಿ ಗಣೇಶ ಹೇಳಿದರು. ಬನಹಟ್ಟಿ ಹಟಗಾರ ಪತ್ತಿನ ಸಹಕಾರಿ ಸಂಘದಲ್ಲಿ ನೇಕಾರರಿಂದ ನಡೆದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಾನೂ ಕೂಡ ನೇಕಾರನ ಮಗನಾಗಿದ್ದು, ಸಮುದಾಯದ ಕಷ್ಟ ಕಾರ್ಪಣ್ಯದ ಪರಿಸ್ಥಿತಿಯ ಬಗ್ಗೆ ಅರಿವಿದೆ. ಶಾಶ್ವತ ಪರಿಹಾರಕ್ಕಾಗಿ ಸೂಕ್ತ ಕ್ರಮಕ್ಕೆ ಸರ್ಕಾರವನ್ನು ಒತ್ತಾಯಿಸುವುದರಜೊತೆಗೆಸದ್ಯಹಿಂದುಳಿದ



ವರ್ಗಗಳ ಇಲಾಖೆಗಳಿಂದ ದೊರಕುವ ಯೋಜನೆಗಳನ್ನು ನೇಕಾರರು ಸದ್ಬಳಕೆ ಮಾಡಿಕೊಂಡು ಆರ್ಥಿಕ ಸಬಲೀಕರಣ ಹೊಂದಬೇಕೆಂದರು. ರಾಜ್ಯದಲ್ಲಿಯೇ ಅತಿ ಹೆಚ್ಚು ನೇಕಾರ ಸಮುದಾಯ ಹೊಂದಿರುವ ಗದಗ, ಬಾಗಲಕೋಟೆ, ವಿಜಯಪುರ, ದೊಡ್ಡಬಳ್ಳಾಪುರ ಸೇರಿದಂತೆ ಇತರೆ ಜಿಲ್ಲೆಗಳಿಗೆ ವಿಶೇಷ ಆದ್ಯತೆ ನೀಡುವಂತೆ ಮುಖ್ಯಮಂತ್ರಿಗಳಲ್ಲಿಮನವಿಮಾಡುವದಾಗಿ ತಿಳಿಸಿದರು.

ಸಂಘದ ಅಧ್ಯಕ್ಷ ಸುರೇಶ ಕೋಲಾರ, ಉಪಾಧ್ಯಕ್ಷ ದಾನಪ್ಪ ಹುಲಜತ್ತಿ, ವಿರುಪಾಕ್ಷಪ್ಪ ಕೊಕಟನೂರ, ಚನವೀರಪ್ಪ ಬಾಣಕಾರ, ದೇವೇಂದ್ರಶೀಲವಂತ,ಈರಪ್ಪಹೊನವಾಡ, ಅಶೋಕ ಮಾಲಾಪುರ, ಚಂದ್ರಶೇಖರ ಬಡ್ಡೂರ, ರಾಜು ಜಾಲಿಗಿಡದ, ಶೇಖರ ಹಕ್ಕಲದಡ್ಡಿ, ಬಸವರಾಜ ಕೊಕಟನೂರ, ರವಿ ಬಾಡಗಿ, ಮಧುಕೇಶ್ವರ ಬೆಳಗಲಿ, ಹೇಮಲತಾ ಪಟ್ಟಣ,ಶೋಭಾ ಚನಪನ್ನವರ, ವ್ಯವಸ್ಥಾಪಕ ಸಂಜಯ ಜವಳಗಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಪೌರಾಯುಕ್ತರಾಗಿ ಜಾಧವ ನೇಮಕ



**ರಬಕವಿ–ಬನಹಟ್ಟಿ :** ಸ್ಥಳೀಯ ನಗರಸಭೆಯ ನೂತನ ಪೌರಾಯುಕ್ತರಾಗಿ ರಮೇಶ ಜಾಧವ ಗುರುವಾರ ಅಧಿಕಾರ ಸ್ವೀಕರಿಸಿದರು.

## ಮುಖ್ಯಾಧಿಕಾರಿಯಾಗಿ ನಾಮದೇವ ಲಮಾಣಿ ಅಧಿಕಾರ ಸ್ವೀಕಾರ

**ಮಹಾಲಿಂಗಪುರ :** ಪಟ್ಟಣದ ಪುರಸಭೆಯ ನೂತನ ಮುಖ್ಯಾಧಿಕಾರಿಯಾಗಿ ನಾಮದೇವ ಲಮಾಣಿ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಸಮೀಪದ ರನ್ನಬೆಳಗಲಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಯಾಗಿದ್ದ ನಾಮದೇವ ಲಮಾಣಿ ಮಹಾಲಿಂಗಪುರ ಪುರಸಭೆ ಮುಖ್ಯಾಧಿಕಾರಿಯಾಗಿ ವರ್ಗಾವಣೆಯಾಗಿ ನೇಮಕಗೊಂಡಿದ್ದಾರೆ.

ಪುರಸಭೆ ನಿಕಟಪೂರ್ವ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ನೂತನ ಮುಖ್ಯಾಧಿಕಾರಿ ನಾಮದೇವ ಲಮಾಣಿ ಅವರನ್ನು ಸನ್ಮಾನಿಸಿ ಸ್ವಾಗತಿಸಲಾಯಿತು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್



ಬಾಗವಾನ, ಸದಸ್ಯ ಅಪ್ಪಾಸಾಬ ನಾಲಬಂದ, ಅಧಿಕಾರಿಗಳಾದ ಎಸ್. ಎನ್. ಪಾಟೀಲ, ಪಿ. ವೈ. ಸೊನ್ನದ, ಎಸ್. ಎಂ. ಮುಲ್ಲಾ, ಮುಖಂಡರಾದ ವಿಜುಗೌಡ ಪಾಟೀಲ, ರಾಮಣ್ಣ ಹಟ್ಟಿ, ಸುನೀಲಗೌಡ ಪಾಟೀಲ, ಸದಾಶಿವ ಗೊಬ್ಬರದ, ಲಕ್ಷ್ಮಣ ಮಾಂಗ, ಸಿಬ್ಬಂದಿಗಳಾದ ಎಂ. ಕೆ. ದಳವಾಯಿ, ರಾಮು ಮಾಂಗ ಸೇರಿದಂತೆ ಇನ್ನೂ ಹಲವರು ಹಾಜರಿದ್ದರು.

## ದುಶ್ಚಟಗಳಿಂದ ದೂರವಿರಿ: ಪಿಎಸ್ಐ ಶಾಂತಾ ಹಳ್ಳಿ

**ರಬಕವಿ–ಬನಹಟ್ಟಿ :** ಪ್ರತಿಯೊಬ್ಬರೂ ದುಶ್ಚಟಗಳಿಂದದೂರವಿದ್ದುಸುಂದರಹಾಗೂ ಸಾರ್ಥಕ ಜೀವನ ರೂಪಿಸಿಕೊಳ್ಳಬೇಕೆಂದು ಬನಹಟ್ಟಿಯ ಠಾಣಾಧಿಕಾರಿ ಶ್ರೀಮತಿ ಶಾಂತಾ ಹಳ್ಳಿ ಹೇಳಿದರು.

ಬನಹಟ್ಟಿ ಪೊಲೀಸ್ ಇಲಾಖೆ ವತಿಯಿಂದ ತಾಲೂಕಿನ ನಾವಲಗಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢ ವಿಭಾಗದಲ್ಲಿ ಗುರುವಾರ ದಿವಸ ಅಂತರಾಷ್ಟ್ರೀಯ ಮಾದಕ ವ್ಯಸನ ಮುಕ್ತ ದಿನಾಚರಣೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳ ಬಳಕೆ, ಮಾರಾಟ ಹಾಗೂ ಅಂತಹ ದಂಧೆಗಳಿಂದ ಆಗುವ ಅಪಾಯಗಳ ಬಗ್ಗೆ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು.

ವಿಶ್ವಾದ್ಯಂತ ಮಕ್ಕಳು ಹಾಗೂ ಯುವಕರು ಈ ಡ್ರಗ್ಸ್ ಮಾಫಿಯಾಗೆ ಬಲಿಪಶುಗಳಾಗಿ




ಆರೋಗ್ಯ ನೆಮ್ಮದಿ ಸಂತಸವನ್ನು ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ಹಲವರು ಅನೇಕ ರೀತಿಯ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಅಷ್ಟೇ ಅಲ್ಲದೆ ಆರ್ಥಿಕವಾಗಿಯೂ ಕೆಲವರು ದಿವಾಳಿಯಾಗಿದ್ದಾರೆ. ಕೌಟುಂಬಿಕ ಮತ್ತು ಸಾಮಾಜಿಕ ಬದುಕು ಹದಗೆಟ್ಟು ಇದರಿಂದ ಸಮಾಜದ ಮೇಲೆಯೂ ಹಾನಿಕಾರಕ ಪರಿಣಾಮ ಬೀರುತ್ತದೆ. ಹೀಗಾಗಿ ಮಾದಕ ವಸ್ತುಗಳಿಂದ ದೂರ ಸರಿದು ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸಬೇಕಾದ ಅಗತ್ಯವಿದೆ. ಸಕಲ ಜೀವರಾಶಿಯಲ್ಲಿ ಮಾನವ ಕುಲ ಶ್ರೇಷ್ಠವಾಗಿದ್ದು , ಅದನ್ನು ಸಂಸ್ಕಾರ ಸಂಸ್ಕೃತಿಯ ಜೊತೆಗೆ ಪರಿಪೂರ್ಣ ಶಿಕ್ಷಣದೊಂದಿಗೆಜೀವನವನ್ನು ರೂಪಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಮುಖ್ಯ ಗುರುಮಾತೆ ರೇಖಾ ಕದಮ್, ಉಪಾಧ್ಯಕ್ಷ ಬಸವರಾಜ ಗಣಿ,ಗಂಗಪ್ಪಅಮ್ಮಲಜೇರಿ,ಕಾಡೇಶಕಂಪು, ಸದಾಶಿವ ಮೇತ್ರಿ, ಪರಶುರಾಮ ನಾಟಿ–ಕಾರ, ಹಣಮಂತ ಹಾಲಳ್ಳಿ, ಮಹಾಂತೇಶ ಖವಟಕೊಪ್ಪ, ಎ. ಎಮ್. ನದಾಫ, ಲಕ್ಷ್ಮೀ ಮೋಟಗಿ, ದೌಲತಬಿ ಜಮಖಂಡಿ, ದ್ರಾಕ್ಷಾಯಿಣಿ ಸಂಗಾನಟ್ಟಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಸಲಹಾ ಸಮಿತಿ ಸಭೆಯತ್ತ ರೈತರ ಚಿತ್ತ

**ಕೊಪ್ಪಳ :** ರಾಜ್ಯದ ನಾಲ್ಕು ಜಿಲ್ಲೆಗಳ ಜನರಿಗೆ ಕೃಷಿ ಚಟುವಟಿಕೆ ಮತ್ತು ಕುಡಿಯಲು ಜೀವನಾಯಾಗಿರುವ ತುಂಗಭದ್ರಾ ಜಲಾಶಯದಿಂದ ನೀರು ಹಂಚಿಕೆ ಮಾಡಲು ಶುಕ್ರವಾರ ನೀರಾವರಿ ಸಲಹಾ ಸಮಿತಿ ಸಭೆ ಬೆಂಗಳೂರಿನಲ್ಲಿ ಆಯೋಜನೆಯಾಗಿದ್ದು, ರೈತರ ಚಿತ್ತ ಆ ಸಭೆಯತ್ತ ಹರಿದಿದೆ.

ಈ ಸಲ ಮುಂಗಾರು ಪೂರ್ವದಲ್ಲಿಯೇ ದಕ್ಷಿಣದ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿ ಅವಧಿಗಿಂತಲೂ ಮೊದಲೇ ನೀರು ಜಲಾಶಯಕ್ಕೆ ಬಂದಿದೆ. ಈ ನೀರಿನಲ್ಲಿ ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ ರಾಜ್ಯಗಳು ಪಾಲುದಾರರಾಗಿವೆ. ರಾಜ್ಯದಲ್ಲಿ ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳ ಜನರಿಗೆ ಜಲಾಶಯದ ನೀರು ಆಸರೆಯಾಗಿದೆ.

ಪಾಲುದಾರ ರಾಜ್ಯಗಳ ನಿಗದಿತ ನೀರು ಉಳಿಸಿದ ಬಳಿಕ ಉಳಿಯುವ ನೀರಿನಲ್ಲಿ ಜಲಾಶಯದ ಸುತ್ತಮುತ್ತಲಿನ ಜಿಲ್ಲೆಗಳಿಗೆ ಖಾರಿಫ್ ಬೆಳೆಗಳಿಗೆ ನೀರು ಹರಿಸಬೇಕಾಗಿದೆ.

ಜಲಾಶಯದ ಗರಿಷ್ಠ ಮಟ್ಟ 1633 ಅಡಿಗಳಷ್ಟು ಇದ್ದು, ಬೆಳಿಗ್ಗೆ ಅಂತ್ಯಕ್ಕೆ 1616.85 ಅಡಿ ನೀರು ಸಂಗ್ರಹವಾಗಿತ್ತು. ಒಟ್ಟು ಸಂಗ್ರಹಣಾ ಸಾಮರ್ಥ್ಯ 105.788 ಟಿಎಂಸಿ ಅಡಿಯಿದ್ದು, ಪ್ರಸ್ತುತ 52.939 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಕಳೆದ ದಿನಗಳಿಂದ ಒಳಹರಿವು ಕೂಡ ಉತ್ತಮವಾಗಿದೆ.



ಒಂದೇ ದಿನ 38,080 ಕ್ಯೂಸೆಕ್ಸ್‌ನಷ್ಟು ಒಳಹರಿವು ನೀರು ಬಂದಿದೆ.

ಈ ಜಲಾಶಯದ ನೀರು ಬಳಸಿಕೊಂಡು ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ ಹಾಗೂ ಕೊಪ್ಪಳ ತಾಲ್ಲೂಕಿನ ಕೆಲವು ಭಾಗದಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ. ಈ ಮೂರು ತಾಲ್ಲೂಕುಗಳನ್ನು ಒಳಗೊಂಡೇ ಜಿಲ್ಲೆಯಲ್ಲಿ 60 ಸಾವಿರ ಹೆಕ್ಟೇರ್‌ನಷ್ಟು ಭತ್ತ ಬಿತ್ತನೆ ಪ್ರದೇಶವಿದೆ. ಇದಲ್ಲದೆ ರಾಯಚೂರು, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳಿಗೂ ನೀರು ಹರಿಸಬೇಕಿದೆ.

ಕಳೆದ ವರ್ಷ ಜಲಾಶಯದ 19ನೇ ಕ್ರಸ್ಟ್‌ಗೇಟ್ ಮುರಿದು ಹೋಗಿದ್ದರಿಂದ ತಾತ್ಕಾಲಿಕವಾಗಿ ಗೇಟ್ ಅಳವಡಿಕೆ ಮಾಡಲಾಗಿದೆ. ಏಳು ದಶಕಗಳಷ್ಟು ಹಳೆಯದಾದ ಆಣೆಕಟ್ಟಿನ ಎಲ್ಲ ಗೇಟ್‌ಗಳನ್ನು ಬದಲಿಸಬೇಕು ಎಂದು ಜಲಾಶಯಗಳ ಸುರಕ್ಷತಾ ತಜ್ಞರು ಎಚ್ಚರಿಕೆಯನ್ನೂ ನೀಡಿದ್ದಾರೆ. ಆದ್ದರಿಂದ 105.788 ಟಿಎಂಸಿ ಅಡಿ ಸಾಮರ್ಥ್ಯದ ತುಂಗಭದ್ರಾದಲ್ಲಿ ಗರಿಷ್ಠ 80 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹ ಮಾಡಲು ಟಿ.ಬಿ. ಬೋರ್ಡ್ ಅಧಿಕಾರಿಗಳು ಸೂಚಿಸಿದ್ದಾರೆ.

ಒಂದೆಡೆ ನೀರು ಸಂಗ್ರಹ ಪ್ರಮಾಣ ಮೊದಲಿಗಿಂತ ಕಡಿಮೆಯಾಗಲಿದ್ದು, ವರ್ಷದಲ್ಲಿ ಎರಡು ಬಾರಿ ಬೆಳೆಯುವ ಭತ್ತಕ್ಕೆ ಜಲಾಶಯದಿಂದಲೇ ನೀರು ಒದಗಿಸಬೇಕು ಎನ್ನುವುದು ರೈತರ ಆಗ್ರಹವಾಗಿದೆ. ವರ್ಷದ ಮೊದಲ ಸಲಹಾ ಸಮಿತಿ ಸಭೆಯಲ್ಲಿ ಮೊದಲ ಬೆಳೆಗೆ ಮಾತ್ರ ನೀರು ಹರಿಸುವ ಬಗ್ಗೆ ಚರ್ಚೆ ನಡೆಯಲಿದ್ದು,

ಬಳಿಕವೂ ಉತ್ತಮ ಮಳೆಯಾಗಿ ಒಳಹರಿವು ಬಂದರೆ ಮಾತ್ರ ಎರಡನೇ ಬೆಳೆಗೆ ನೀರು ಹರಿಸುವ ಬಗ್ಗೆ ಚಿಂತನೆ ನಡೆಯಲಿದೆ. ಮೊದಲ ಬೆಳೆಗಾದರೂ ಎಷ್ಟು ನೀರು ಸಿಗುತ್ತದೆ ಎನ್ನುವುದು ರೈತರಲ್ಲಿ ಚರ್ಚೆಗೆ ಕಾರಣವಾಗಿದೆ.

ಬೆಂಗಳೂರಿನಲ್ಲಿ ಸಭೆ ಆಯೋಜನೆಗೆ ಆಕ್ಷೇಪ

ಕೊಪ್ಪಳ: 'ರೈತರ ಬೇಕು ಬೇಡಗಳನ್ನು ಕೇಳಲು ಪ್ರತಿವರ್ಷದಂತೆ ಈ ಬಾರಿಯೂ ಮುನಿರಾಬಾದ್‌ನಲ್ಲಿಯೇ ಐಸಿಸಿ ಸಲಹಾ ಸಮಿತಿ ಸಭೆ ನಡೆಸಬೇಕಿತ್ತು. ಯಾರ ಸಲುವಾಗಿ ಬೆಂಗಳೂರಿನಲ್ಲಿ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೇಸೂಗೂರು ಪ್ರಶ್ನಿಸಿದರು. ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ರೈತರಿಗೆ ಎರಡು ಬೆಳೆಗೆ ನೀರು ಬೇಕು.

ಮುರಿದು ಹೋದ ಕ್ರಸ್ಟ್‌ಗೇಟ್‌ಗೆ ಕಾಯಂ ಗೇಟ್ ಕಲ್ಪಿಸಿ ಪೂರ್ಣ ಪ್ರಮಾಣದಲ್ಲಿ ನೀರು ಸಂಗ್ರಹಿಸಲು ಮಳೆಗಾಲದ ವೇಳೆಗೆ ಸಿದ್ಧತೆ ಮಾಡಿಕೊಳ್ಳಬೇಕಿತ್ತು.

ಈ ವಿಷಯದಲ್ಲಿ ಸರ್ಕಾರ ಸಂಪೂರ್ಣ ಬೇಜವಾಬ್ದಾರಿಯುತವಾಗಿ ನಡೆದುಕೊಂಡಿದೆ' ಎಂದು ಆರೋಪಿಸಿದರು.

'ರಾಜ್ಯ ಸರ್ಕಾರದ ಬಳಿಯಂತೂ ಹಣವಿಲ್ಲ; ಕನಿಷ್ಠ ಇರುವ ನೀರನ್ನಾದರೂ ರೈತರಿಗೆ ಕೊಡಲಿ. ಈಗಿನ ಸರ್ಕಾರಕ್ಕೆ ಕಾಳಜಿ ಇಲ್ಲ ಐಸಿಸಿ ಸಲಹಾ ಸಮಿತಿ ಅಧ್ಯಕ್ಷ ಸಚಿವ ಶಿವರಾಜ ತಂಗಡಗಿ ಮುಖ್ಯಮಂತ್ರಿ ಬಳಿಕ ನಾನೇ ಎನ್ನುವಂತೆ ಬಿಂಬಿಸಿಕೊಳ್ಳುತ್ತಿದ್ದಾರೆ.

ರೈತರ ಆಶಯಕ್ಕೆ ತಕ್ಕಂತೆ ಸಭೆಯಲ್ಲಿ ನಿರ್ಧಾರ ಕೈಗೊಳ್ಳದಿದ್ದರೆ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಶೋಕ ಗುಡದಳ್ಳಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಪುಟ್ಟರಾಜ ಚಕ್ಕಿ ಮುಖಂಡರಾದ ಗಣೇಶ ಹೊರತಟ್ನಾಳ ಹಾಗೂ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಗಣೇಶ ಹೊರತಟ್ನಾಳ ಪಾಲ್ಗೊಂಡಿದ್ದರು.

## ಸಿಲಿಂಡರ್ ಕಳ್ಳತನ: ಆರೋಪಿಗಳ ಬಂಧನ

**ಗಂಗಾವತಿ :** ನಗರದ ವಿವಿಧ ವಾರ್ಡುಗಳಲ್ಲಿ ಸಿಲಿಂಡರ್ ಕಳ್ಳತನ ಮಾಡಿದ ಮೂವರು ಆರೋಪಿಗಳನ್ನ ನಗರ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಗಂಗಾವತಿಯ ಗೌಸ್, ಅನ್ವರ್, ಅಕ್ರಮ್ ಬಂಧಿತರು. ಅವರಿಂದ 11 ಸಿಲಿಂಡರ್, 4 ಮೋಟರ್ ಸೈಕಲ್‌ಗಳು ವಶಕ್ಕೆ ಪಡೆದುಕೊಳ್ಳಲಾಗಿದೆ.

ಗಂಗಾವತಿ ಹೊಸಳ್ಳಿ ರಸ್ತೆಯ ರಮೇಶ ನಾಯಕ, ಹನುಮಂತಪ್ಪ ಕುರುಬರ, ಜಯನಗರ ನಾರಾಯಣಪ್ಪ ನಾಯಕ ಎನ್ನುವವರ ಮನೆಯಲ್ಲಿ ಸಿಲಿಂಡರ್ ಕಳ್ಳತನವಾಗಿರುವ ಕುರಿತು ಪ್ರಕರಣ ದಾಖಲಾಗಿತ್ತು.

ಪ್ರಕರಣದ ಭಾಗವಾಗಿ ಅಧಿಕಾರಿಗಳು ಮೂವರು ಆರೋಪಿಗಳನ್ನ ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

## ವಿಜೃಂಭಣೆಯ ಮಣ್ಣೆತ್ತುಗಳ ಮೆರವಣಿಗೆ

**ಕನಕಗಿರಿ :** ಮಣ್ಣೆತ್ತಿನ ಅಮಾವಾಸ್ಯೆ ನಿಮಿತ್ತ ಪಟ್ಟಣದ ವಿವಿಧ ಬೀದಿಗಳಲ್ಲಿ ರೈತರು, ವರ್ತಕರು ಮಣ್ಣೆತ್ತುಗಳನ್ನು ಖರೀದಿಸಿ ಪೂಜೆ ಸಲ್ಲಿಸಿದರು.

ಮಣ್ಣೆತ್ತುಮೂರ್ತಿಗಳನ್ನು ಪೂಜೆ ಸಲ್ಲಿಸಿದ ರೈತರ ಮನೆಗಳನ್ನು ಗುರುತಿಸಿದ ಬಾಲಕರು ಬುಧವಾರ ಅವರ ಮನೆಗಳಿಗೆ ತೆರಳಿ ಮಣ್ಣೆತ್ತು ಪಡೆದು ಆಯಾ ಓಣಿಗಳಲ್ಲಿರುವ ಮನೆಯಲ್ಲಿ ಒಂದೆಡೆ ಸಾಲಾಗಿ ಕೂಡಿಸಿದರು.

ದಾನ್ಯ ಮಾರಾಟ ಮಾಡಿದ ಹಾಗೂ ಸಂಗ್ರಹಿಸಿದ ನಗದು ಹಣದಲ್ಲಿ ಮಂಡಾಳು, ಮಿರ್ಚಿ ಹಾಗೂ ಪುಲಾವ್, ಇತರೆ ಖಾದ್ಯ ಪದಾರ್ಥ ತಯಾರಿಸಿ ವಿಸರ್ಜನೆ ಮುಗಿದ ನಂತರ ಒಂದೆಡೆ ಕುಳಿತು ಸಾಮೂಹಿಕ ಭೋಜನ ಮಾಡಿದರು. ಸಹಜ ಮಣ್ಣು ಹಾಗೂ ಪಿಓಪಿ ಮಣ್ಣೆತ್ತುಗಳ ಮೂರ್ತಿಗಳು ಗಮನ ಸೆಳೆದವು.

# ಮಾದಕ ವ್ಯಸನಿಯಾಗದೆ ಉಜ್ವಲ ಭವಿಷ್ಯ ರೂಪಿಸಿ: ಡಿವೈಎಸ್ಪಿ ಸಿದ್ದಲಿಂಗಪ್ಪಗೌಡ ಪಾಟೀಲ

**ಗಂಗಾವತಿ:** 'ಇತ್ತೀಚೆಗೆ ಯುವಕರು ದುಶ್ಚಟಗಳಿಗೆ ದಾಸರಾಗಿ, ಜೀವನ ಹಾಳು ಮಾಡಿಕೊಳ್ಳುತ್ತಿದ್ದು, ಇದರಿಂದ ಕುಟುಂಬಗಳು ಬೀದಿಗೆ ಬೀಳುತ್ತಿವೆ. ಯುವಕರು ಕುಟುಂಬ ನಿರ್ವಹಣೆ, ಜವಾಬ್ದಾರಿ, ಪಾಲಕರ ಕಷ್ಟ ಅರಿತು, ಉಜ್ವಲ ಜೀವನ ರೂಪಿಸಿಕೊಳ್ಳುವತ್ತ ಚಿತ್ತ ಹರಿಸಬೇಕು' ಎಂದು ಡಿವೈಎಸ್ಪಿ ಸಿದ್ದಲಿಂಗಪ್ಪಗೌಡ ಪಾಟೀಲ ಹೇಳಿದರು.

ನಗರದ ಕೃಷ್ಣದೇವರಾಯ ವೃತ್ತದಲ್ಲಿ ಗುರುವಾರ ಪೊಲೀಸ್ ಇಲಾಖೆ, ಗೋಗ್ರೀನ್ ಸೈಕ್ಲಿಂಗ್, ಭಾರತೀಯ ವೈದ್ಯಕೀಯ ಸಂಘ, ಸೇಂಟ್‌ಪಾಲ್ಸ್ ಡಿ–ಫಾರ್ಮಸಿ ಕಾಲೇಜು ಸಹಯೋಗದಲ್ಲಿ ಮಾದಕ ವಸ್ತುಗಳ ಬಳಕೆ ವಿರೋಧಿ ದಿನದಲ್ಲಿ ಭಾಗವಹಿಸಿ ಮಾತನಾಡಿದರು.

ಮಾದಕ ವಸ್ತುಗಳ ದಾಸರಾದರೆ, ಹೊರಬರುವುದು ಕಷ್ಟ. ಪಾರ್ಟಿ, ಶೋಕಿ, ಇವೆಂಟ್ ನೆಪದಲ್ಲಿ ಸಿಗರೇಟ್, ಗುಟ್ಕಾ, ಮದ್ಯ, ಗಾಂಜಾ, ಚರಸ್ ಸೇವನೆಗೆ ಮುಂದಾದರೆ, ಮುಂದೆ ನರಕದ ಜೀವನ ಕಟ್ಟಿಟ್ಟ ಬುತ್ತಿ. ಇಂತಹ ದುಶ್ಚಟಗಳು ಕಾನೂನುಬಾಹಿರ. ಹಾಗಾಗಿ ಯುವಕರು ದುಶ್ಚಟಗಳಿಂದ ದೂರವಿರಬೇಕು' ಎಂದರು.




ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಎ.ಎಸ್.ಎನ್.ರಾಜು ಮಾತನಾಡಿ, ಯುವ ಸಮೂಹ ದುಶ್ಚಟಗಳಿಗೆ ಅಂಟಿಕೊಂಡು, ಜೀವನಹಾಳು ಮಾಡಿಕೊಳ್ಳುತ್ತಿದ್ದಾರೆ. ಡ್ರಗ್ಸ್ ಬಳಸುವ ಯುವಕ, ಯುವತಿಯರು ಸಾರ್ವಜನಿಕ ಪ್ರದೇಶದಲ್ಲಿ ಪ್ರಜ್ಞೆ ಕಳೆದುಕೊಂಡು ಮಾನ ಹರಾಜು ಮಾಡಿಕೊಂಡು, ಕುಟುಂಬಕ್ಕೆ ಕೆಟ್ಟಹೆಸರು ತರುತ್ತಿದ್ದಾರೆ. ಮಾದಕ ವಸ್ತುಗಳ ತಡೆಗೆ ಎಲ್ಲರೂ ಜಾಗೃತರಾಗಬೇಕು. ಅಡಿಕ್ಷನ್ ಸೆಂಟರ್‌ಗಳಿಗೆ ತೆರಳಿ ಚಿಕಿತ್ಸೆ ಪಡೆಯುವಂತೆ ತಿಳಿಸಿದರು.

ನಂತರ ಜಾಗೃತಿಗಾಗಿ ಸೈಕಲ್ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಫ್ಲೈಯಿಂಗ್ ಫೆದರ್ಸ್, ವಿಜಯನಗರ ಸ್ಪೋರ್ಟ್ಸ್ ಕ್ಲಬ್, ಲಯನ್ಸ್ ಕ್ಲಬ್, ಗಂಗಾವತಿ ಚಾರಣ ಸಂಘ, ಕಿಷ್ಕಿಂದ ಯುವಚಾರಣ ಬಳಗ, ಪರಿಸರ ಸೇವಾ ಟ್ರಸ್ಟ್ ಸೇರಿದಂತೆ ಹಲವು ಸಂಘಟನೆಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು.

ನಗರ ಪೊಲೀಸ್ ಠಾಣೆಯ ಪಿಐ ಪ್ರಕಾಶ್ ಮಾಳಿ, ಐಎಂಎ ಕಾರ್ಯದರ್ಶಿ ಡಾ.ನಾಗರಾಜ, ಅಭಿಷೇಕ, ಅರವಿಂದಗೌಳಿ, ಡಾ.ಅಮರ ಪಾಟೀಲ, ಲಯನ್ಸ್ ಕ್ಲಬ್ ಅಧ್ಯಕ್ಷ ಡಾ.ಶಿವಕುಮಾರ ಮಾಲಿ ಪಾಟೀಲ, ಸೇಂಟ್ ಪಾಲ್ಸ್ ಡಿ–ಫಾರ್ಮಸಿ ಕಾಲೇಜಿನ ಸರ್ವೇಶ್ ವಸ್ತ್ರದ್, ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್ ವೆಂಕಟೇಶ ರಾಠೋಡ, ಸಂಚಾರಿ ಠಾಣೆ ಪಿಎಸ್‌ಐ ಶಾರದಮ್ಮ ಉಪಸ್ಥಿತರಿದ್ದರು.

## ಕನಕದಾಸರ ಪ್ರತಿಮೆ ವಿರೂಪ: ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ

**ಕಾರಟಗಿ :** ತಾಲ್ಲೂಕಿನ ಬೇವಿನಾಳ ಗ್ರಾಮದಲ್ಲಿ ಸಂತ ಕನಕದಾಸರ ಪ್ರತಿಮೆ ವಿರೂಪಗೊಳಿಸಿದ ಕಿಡಿಗೇಡಿಗಳನ್ನು 15 ದಿನಗಳಲ್ಲಿ ಪತ್ತೆ ಮಾಡಿ, ಕಠಿಣ ಕ್ರಮಕ್ಕೆ ಒಳಪಡಿಸಬೇಕು. ಸಂತರ, ಶರಣರ ಪ್ರತಿಮೆಗಳಿಗೆ ಸೂಕ್ತ ರಕ್ಷಣೆ ಒದಗಿಸಿ, ಸಾಮಾಜಿಕ ಸಾಮರಸ್ಯ ಹದಗೆಡಿಸದಂತೆ ಅಗತ್ಯ ಕ್ರಮಕ್ಕೆ ಮುಂದಾಗಬೇಕು ಎಂದು ತಾಲ್ಲೂಕು ಹಾಲುಮತ ಸಮಾಜದವರು ಪ್ರವಾಸಿ ಮಂದಿರದಿಂದ ಬೈಕ್ ರ‍್ಯಾಲಿ ಮೂಲಕ ಗುರುವಾರ ಉಪ ತಹಶೀಲ್ದಾರ್ ಜಗದೀಶಕುಮಾರ್‌ಗೆ ಮನವಿ ಸಲ್ಲಿಸಿದರು.

ಸಮಾಜದ ಮುಖಂಡ ವೀರೇಶ ಸಾಲೋಣಿ ಮಾತನಾಡಿ, 'ದಾಸ ಶ್ರೇಷ್ಠ ಕನಕದಾಸರ ಪ್ರತಿಮೆಯನ್ನು ದುಷ್ಕರ್ಮಿಗಳು ವಿರೂಪಗೊಳಿಸಿರುವುದು ಖಂಡನೀಯ' ಎಂದರು.

ಮುಖಂಡ ಶರಣಪ್ಪ ಪರಕಿ ಮಾತನಾಡಿದರು.

ಮುಖಂಡರಾದ ಉಮೇಶ ಭಂಗಿ, ಪುರಸಭೆ ಮಾಜಿ ಸದಸ್ಯ ಹೊಳೆಯಪ್ಪ ದೇವರಮನಿ, ಸದಸ್ಯ ಮಂಜುನಾಥ ಮೇಗೂರು ನಿವೃತ್ತ ಪಿಎಸ್‌ಐ ಕೆ. ಮಲ್ಲಪ್ಪ, ರೈತ ಮುಖಂಡರಾದ ಮರಿಯಪ್ಪ ಸಾಲೋಣಿ, ಪ್ರಮುಖರಾದ ಶರಣಪ್ಪ ಕರಡಿ, ಲಿಂಗಪ್ಪ ರೌಡಕುಂದಿ, ಮಂಜುನಾಥ ಸುದ್ದಿ, ಸೋಮನಾಥ ಗಚ್ಚಿನಮನಿ, ರಮೇಶ



ಮಾವಿನಮಡಗು, ಚಂದ್ರು ಆನೆಹೊಸೂರು, ಅಯ್ಯಪ್ಪ ಸುದ್ದಿ, ಶಂಕ್ರಪ್ಪ ಗಚ್ಚಿನಮನಿ, ವಿರುಪಣ್ಣ ಮೂಲಿಮನಿ, ದೇವರಾಜ್ ಜಮಾಪುರ, ಕಾರಮಿಂಚಪ್ಪ ಜಮಾಪುರ, ಶಿವಮೂರ್ತಿ ಬಾರ್ಸಿ, ಜನಗಂಡೆಪ್ಪ ಪೂಜಾರಿ, ಶಿವಪ್ಪ ಬೇವಿನಾಳ, ಹನುಮಂತಪ್ಪ ವಾಲೀಕಾರ ಪನ್ನಾಪುರ, ವಿಕ್ರಮ್ ಬೇವಿನಾಳ, ರಮೇಶ ಕುಂಟೋಜಿ ವಕೀಲ, ರಾಮಚಂದ್ರ ವಕೀಲ, ಮಾರುತಿ ವಕೀಲ, ಬಸವರಾಜ ಬೂದಗುಂಪಾ, ವೀರೇಶ ಹಾಲಸಮುದ್ರ, ಬಜ್ಜೆಪ್ಪ ಬೇವಿನಾಳ, ಹನುಮಂತಪ್ಪ ಕುಂಟೋಜಿ, ಉಮೇಶ ಹೊಸ ಕುರುಬರು,

ಲಿಂಗಪ್ಪ ಗೌರಿಪುರ, ನಾಗಪ್ಪ ಸುಂಕದ, ಅಗರೆಪ್ಪ ಕೊಟ್ನೆಕಲ್, ಹನುಮಂತಪ್ಪ ಶಾಲಿಗನೂರು, ನಾಗಪ್ಪ ನವಲಿ, ಅಮರೇಶಪ್ಪ ತಳವಾರ, ಗಾದಿಲಿಂಗಪ್ಪ, ಮರಿಸ್ವಾಮಿ, ಮುದುಕಪ್ಪ ಕುರಿ, ಸಿದ್ದಪ್ಪ ಕಂಪ್ಲಿ, ಹುಲಗಪ್ಪ ಬೆನ್ನೂರು, ಚಿದಾನಂದ ಗದ್ದಿ ಉಪಸ್ಥಿತರಿದ್ದರು.

## ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆಗೆ ಮತ್ತೊಂದು ಗರಿ, 2023–24ರ ಹಂಗಾಮಿನ "ಅತ್ಯುತ್ತಮ ತಾಂತ್ರಿಕ ದಕ್ಷತೆ ಪ್ರಶಸ್ತಿ"

**ಅಥಣಿ :** ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯು "ರಾಜ್ಯದಲ್ಲಿ 2023–24ರ ಕ್ರಷಿಂಗ್ ಸೀಸನ್‌ಗಾಗಿ "ಅತ್ಯುತ್ತಮ ತಾಂತ್ರಿಕ ದಕ್ಷತೆ ಪ್ರಶಸ್ತಿ (ಸಹಕಾರಿ ಸಕ್ಕರೆ ಕಾರ್ಖಾನೆ)" ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಗೆ ಲಭಿಸಿರುವುದು ಸಂತೋಷದಾಯಕ ಸಂಗತಿಯಾಗಿದೆ ಎಂದು ಕಾರಖಾನೆ ಅಧ್ಯಕ್ಷ ಪರಪ್ಪ ಸವದಿ ಹೇಳಿದರು

ತಾಲೂಕಿನ ಸಂಕೋನಟ್ಟಿ ಗ್ರಾಮದ ಬಳಿಯ ಕೃಷ್ಣಾ ಸಹಕಾರಿ ಸಕ್ಕರೆ ಕಾರಖಾನೆ ಕಛೇರಿಯಲ್ಲಿ ಸುದಿಗಾರರೊಂದಿಗೆ ಮಾತನಾಡಿದ ಅವರು ಕರ್ನಾಟಕ ರಾಜ್ಯದಲ್ಲೇ ಸಹಕಾರಿ ರಂಗದ ಸಕ್ಕರೆ ಕಾರಖಾನೆಗಳಲ್ಲಿ ಅತ್ಯುತ್ತಮ ತಾಂತ್ರಿಕ ನಿರ್ವಹಣೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಯಾವುದೇ ಉದ್ಯಮದ ಉತ್ತಮ ಕಾರ್ಯಕ್ಷಮತೆಯನ್ನು ಗುರುತಿಸುವುದು ಜೊತೆಗೆ ಮತ್ತಷ್ಟು ಸುಧಾರಿಸಲು ಮತ್ತು ಇತರರು ಸ್ಪರ್ಧಿಸಲು ಪ್ರೋತ್ಸಾಹಿಸುತ್ತದೆ.

ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ, ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ತಾಂತ್ರಿಕ ನಿಯತಾಂಕಗಳಲ್ಲಿನ ಅವುಗಳ ಕಾರ್ಯಕ್ಷಮತೆಯ ಆಧಾರದ




ತಾಲೂಕಿನ ಕೃಷ್ಣಾ ಸಹಕಾರಿ ಕಾರಖಾನೆಗೆ ಪ್ರಶಸ್ತಿ 2023–24 ರ ಕ್ರಷಿಂಗ್ ಸೀಸನ್‌ಗಾಗಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಲ್ಲಿಸಿದ ಆರ್‌ಟಿಬಿ (ಸಿ) ಪ್ರಕಾರ ತಾಂತ್ರಿಕ ನಿಯತಾಂಕಗಳ ವಿಶ್ಲೇಷಣೆ ಆಧಾರದ ಮೇಲೆ ಪ್ರಶಸ್ತಿ ನಮ್ಮ ಕಾರಖಾನೆಗೆ ಸಿಕ್ಕಿದ್ದು ಸಂತೋಷದ ಜೊತೆಗೆ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂದು ಹೇಳಿದರು.

ಪ್ರಶಸ್ತಿಯನ್ನು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ಅಧ್ಯಕ್ಷ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ಶಿವಾನಂದ ಪಾಟೀಲ ಅವರು ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕ ಮಂಡಳಿಯ ಸದಸ್ಯರಿಗೆ ಪ್ರಶಸ್ತಿ ನೀಡಿ ಗೌರವಿಸಿದರು

ಈ ವೇಳೆ ಉಪಾಧ್ಯಕ್ಷ ಶಂಕರ ವಾಘಮೋಡೆ, ನಿರ್ದೇಶಕರಾದ ಗುರುಬಸು ತೇವಮನಿ, ಶಾಂತಿನಾಥ ನಂದೇಶ್ವರ, ಘೋಳಪ್ಪ ಜತ್ತಿ, ರಮೇಶ ಪಟ್ಟಣ, ವಿಶ್ವನಾಥ ಪಾಟೀಲ, ರುಕ್ಮೀಣಿ ಕುಲಕರ್ಣಿ, ಸೌರಭ ಪಾಟೀಲ, ಸುನಂದಾ ನಾಯಿಕ, ಸಿದ್ರಾಯ ನಾಯಿಕ, ಮಲ್ಲಿಕಾರ್ಜುನ ಗೋಟಖಿಂಡಿ ,ಹಣಮಂತ ಜಗದೇವ, ವ್ಯವಸ್ಥಾಕ ನಿರ್ದೇಶಕ ಜಿ ಎಮ್ ಪಾಟೀಲ, ಮುಖಂಡ ಶ್ರೀಶೈಲ ನಾಯಿಕ, ಮುಖ್ಯ ಲೆಕ್ಕಾಧಿಕಾರಿ ಶಂಕರ ಗೋಟಖಿಂಡಿ, ವಿನಾಯಕ ಮನಗೂಳಿ, ಸುರೇಶ ಠಕ್ಕಣ್ಣವರ, ಹೆಚ್ ಡಿ ಧರಿಗೌಡರ, ಸಿ ಎಸ್ ಪಾಟೀಲ,


ಡಿ ಬಿ ದೇಸಾಯಿ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲೇ ಸಹಕಾರಿ ರಂಗದ ಸಕ್ಕರೆ ಕಾರಖಾನೆಗಳಲ್ಲಿ ಅತ್ಯುತ್ತಮ ತಾಂತ್ರಿಕ ನಿರ್ವಹಣೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಯಾವುದೇ ಉದ್ಯಮದ ಉತ್ತಮ ಕಾರ್ಯಕ್ಷಮತೆಯನ್ನು ಗುರುತಿಸುವುದು ಜೊತೆಗೆ ಮತ್ತಷ್ಟು ಸುಧಾರಿಸಲು ಮತ್ತು ಇತರರು ಸ್ಪರ್ಧಿಸಲು ಪ್ರೋತ್ಸಾಹಿಸುತ್ತದೆ. ನಮ್ಮ ಕಾರ್ಖಾನೆಗೆ ಪ್ರಶಸ್ತಿ ದೊರಕಿರುವುದು ಸಂತಸತಂದಿದೆ.

## ಜಯಶ್ರೀ ಕಾಂಬಳೆಗೆ ಮಹಿಳಾ ಶಕ್ತಿ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ

**ಅಥಣಿ :** ರಾಷ್ಟ್ರೀಯ ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ ಆಯೋಗದ ಅಥಣಿ ತಾಲೂಕಾ ಮಹಿಳಾ ಘಟಕದ ಅಧ್ಯಕ್ಷೆ ಜಯಶ್ರೀ ಭರತ ಕಾಂಬಳೆ ಇವರಿಗೆ ವಿಶ್ವ ಕನ್ನಡ ಜಾನಪದ ಪರಿಷತ್ ಬೆಂಗಳೂರು ಇವರು ಅವರ ಸಮಾಜ ಸೇವೆಯನ್ನು ಗುರುತಿಸಿ "ಕರ್ನಾಟಕ ಮಹಿಳಾ ಶಕ್ತಿ ಸಮಾಜ ಸೇವಾ ರತ್ನ" ನೀಡಿ ಗೌರವಿಸಿದೆ.

ಗುಮ್ಮಟ ನಗರಿ ವಿಜಯಪುರ ಪಟ್ಟಣದ ಶ್ರೀ ಸಿದ್ದೇಶ್ವರ ಕಲಾ ಭವನದಲ್ಲಿ ನಡೆದ ರಾಷ್ಟ್ರೀಯ ಗುಮ್ಮಟ ಉತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಯಶ್ರೀ ಭರತ ಕಾಂಬಳೆ ಇವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.



ಪ್ರಶಸ್ತಿ ಸ್ವೀಕರಿಸಿದ ನಂತರ ಜಯಶ್ರೀ ಭರತ ಕಾಂಬಳೆ ಮಾತನಾಡಿ ನನ್ನ ಸಮಾಜ ಸೇವೆಯನ್ನು ಗುರುತಿಸಿ ವಿಶ್ವ ಕನ್ನಡ ಜಾನಪದ ಪರಿಷತ್ ಬೆಂಗಳೂರು ಇವರು ನನಗೆ ಪ್ರಶಸ್ತಿ ನೀಡಿರುವುದು ನನಗೆ ಖುಷಿ ತಂದಿದೆ. ನಾನು ಅವರಿಗೆ ಧನ್ಯವಾದಗಳನ್ನ ಅರ್ಪಿಸುತ್ತೇನೆ. ಈ ಪ್ರಶಸ್ತಿ ನೀಡಿರುವುದರಿಂದ ನಾನು ಇನ್ನಷ್ಟು ಸಮಾಜ ಸೇವೆ ಮಾಡಲು ಪ್ರೋತ್ಸಾಹಿಸಿದಂತಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಕಾರ್ಯಕ್ರಮದ ಸಂಘಟಕರು ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದ ನೇತೃತ್ವ ವಹಿಸಿದ್ದ ಸುರೇಶ ವಾಘಮೋರೆ ಹಾಗೂ ಪೂಜ್ಯರ ಗುರು ಹಿರಿಯರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ಮೊಹರಂ ಹಬ್ಬದ ನಿಮಿತ್ತ ಶಾಂತಿ ಸಭೆ

**ಅಥಣಿ :** ಹಿಂದೂ–ಮುಸ್ಲಿಮ್ ಭಾವೈಕ್ಯತೆ ಹಾಗೂ ಸೌಹಾರ್ದತೆಗೆ ಹೆಸರಾಗಿರುವ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿಯುತವಾಗಿ ಆಚರಿಸಬೇಕು' ಎಂದು ಪಿಎಸ್‌ಐ ಗಿರಿಮಲ್ಲಪ್ಪ ಉಪ್ಪಾರ ತಿಳಿಸಿದರು.

ಅವರು ಅಥಣಿ ಪೊಲೀಸ್ ಠಾಣೆ ವತಿಯಿಂದ ಡಿವೈಎಸ್ಪಿ ಪ್ರಶಾಂತ ಮುನ್ನೋಳ್ಳಿ ಅವರ ಅಧ್ಯಕ್ಷತೆಯಲ್ಲಿ ಇಲ್ಲಿನ ಪೋಲೀಸ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದ್ದ ಮೊಹರಂ ಪ್ರಯುಕ್ತ ಶಾಂತಿ ಪಾಲನಾ ಸಭೆಯಲ್ಲಿ ಮಾತನಾಡುತ್ತಿದ್ದರು. ಮೊಹರಂ ಹಬ್ಬವು 10 ದಿನಗಳ ವರೆಗೆ ನಡೆಯುತ್ತಿದ್ದು. ಕೆಲ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟಗಳನ್ನ ಹರಿಬಿಟ್ಟು ಸಮಾಜದ ಸ್ವಾಸ್ಥ್ಯ ಕೆಡಿಸುವ ಪ್ರಯತ್ನ ಮಾಡುತ್ತಾರೆ ಇಂತಹ ಸಮಾಜ ಘಾತುಕರ ಸಾಮಾಜಿಕಜಾಲತಾಣಗಳಮೇಲೆ ಸೂಕ್ತ ನಿಗಾವಹಿಸಲಾಗುವುದು ಹಾಗೂ ತಪ್ಪು ಕಂಡು ಬಂದರೆ ಅಂತವರಮೇಲೆಕಾನೂನುಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಯಾರು ಕೂಡ್ ಅಹಿತಕರ ಘಟನೆಗೆ ಆಸ್ಪದ ನೀಡಬಾರದು ಎಂದು ಎಚ್ಚರಿಕೆ ನೀಡಿದರು.

ಮೊಹರಂ ಆಚರಣೆ ವೇಳೆ ಜನದಟ್ಟಣೆ ಉಂಟಾಗದಂತೆ



ನೋಡಿ ಕೊಳ್ಳಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಅನುಮಾನಾಸ್ಪದ ವ್ಯಕ್ತಿಗಳು ಹಾಗೂ ವಾಹನಗಳ ಮೇಲೆ ಸೂಕ್ತ ನಿಗಾ ವಹಿಸಲಾಗುವುದು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕೈಗೊಳ್ಳಲು ಇಲಾಖೆಯೊಂದಿಗೆ ನಾಗರಿಕರ ಸಹಕಾರ ಅವಶ್ಯ ಪ್ರತಿಯೊಂದಕ್ಕೂ ಕಾನೂನು ಇದೆ, ಯಾರು ಸಹ ಕಾನೂನು ಮೀರಿ ಹೋಗಬೇಡಿ, ಯಾರು ಸಹ ಗೊಂದಲಕ್ಕೆ ಇಡಾಗಬೇಡಿ ಮನುಷ್ಯನ ಭಾವನೆ ಹಾಗೂ ಮನುಷ್ಯನವಿಚಾರಗಳುನೂರಾರು ಇರಬಹುದು ಆದರೆ ಕಾನೂನಿಗೆ ಸರ್ವರು ತಲೆಭಾಗಬೇಕು. ಎಂದರು.

ನಂತರ ಬಳವಾಡ ಗ್ರಾಮದ ಮುಸ್ಲಿಂ ಮುಖಂಡ ರಸೂಲಸಾಬ ನದಾಫ್ ಮಾತನಾಡಿ ತಾಲ್ಲೂಕಿನಲ್ಲಿ ಮೊಹರಂ ಹಬ್ಬವನ್ನು ಪ್ರತಿ ವರ್ಷ ಎಲ್ಲ ಸಮುದಾಯದವರು ಒಗ್ಗೂಡಿ ಅತಿ ವಿಜೃಂಭಣೆಯಿಂದ ಆಚರಣೆ ಮಾಡುತ್ತಾ ಬಂದಿದ್ದು ಈ ವರ್ಷವೂ ಕೂಡ್ ಯಾವುದೇ ರೀತಿಯ ಅಹಿತಕರ ಘಟನೆಗೆ ಆಸ್ಪದ ನೀಡದೆ ಶಾಂತ ರೀತಿಯಲ್ಲಿ ಅಚ್ಚು ಕಟ್ಟಾಗಿ ಹಬ್ಬ ಆಚರಣೆ ಮಾಡುತ್ತೇವೆ. ವಿಶೇಷವಾಗಿ ಶಾಸಕ ಲಕ್ಷ್ಮಣ ಸವದಿ ಅವರು ಕಾಂಗ್ರೆಸ್ ಪಕ್ಷಕ್ಕೆ ಬಂದಾಗಿನಿಂದ ತಾಲ್ಲೂಕಿನಲ್ಲಿ ಮತ್ತಷ್ಟು ಜಾತ್ಯತೀತತೆ ಗಟ್ಟಿಯಾಗಿದೆ ನಾವೆಲ್ಲರೂ ಒಗ್ಗಟ್ಟಾಗಿ ಇದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಮುಖಂಡರಾದ ಶಶಿ ಸಾಳವೆ. ಚಿಕ್ಕೋಡಿ ಜಿಲ್ಲಾ ವಕ್ಫ್ ಸಲಹಾ ಸಮಿತಿ ಉಪಾಧ್ಯಕ್ಷ ಆಸೀಫ್ ತಾಂಬೋಳಿ.

ರಾಜೇಂದ್ರ ಐಹೊಳೆ ಹಾಗೂ ಮಂಜು ಹೊಳಿಕಟ್ಟಿ ಮಾತನಾಡಿ ಮೊಹರಂ ಹಬ್ಬ ಶಾಂತ ರೀತಿಯಲ್ಲಿ ಅಚ್ಚುಕಟ್ಟಾಗಿ ಆಚರಣೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಈ ವೇಳೆ ಸಭೆಯಲ್ಲಿ ಅಂಜುಮನ್ ಎ ಇಸ್ಲಾಂ ಕಮೀಟಿ ಅಧ್ಯಕ್ಷ ಸೈಯ್ಯದಅಮೀನ್ ಗದ್ಯಾಳ ಸದಸ್ಯರಾದ ಅಬ್ದುಲಅಜೀಜ್ ಮುಲ್ಲಾ, ಅಬೀದ ಮಾಸ್ತರ್, ಇಮ್ರಾನ್ ಪಟಾಯತ್. ಪುರಸಭೆ ನಾಮನಿರ್ದೇಶಿತ ಸದಸ್ಯ ವಿನಾಯಕ ದೇಸಾಯಿ ಮುಖಂಡರಾದ ಬಾಬು ಖೇಮಲಾಪುರ,

ನಿಸಾರ ಶೇಖ, ಶಿವಾನಂದ ಸೌದಾಗರ, ಏಹಿತೇಶಾಮ ಕಾಜಿ, ಸುಂದರ ಸೌದಾಗರ

ಮಹಾಂತೇಶ ಬಾಡಗಿ, ಸಾಜಿದ ಮುಲ್ಲಾ , ಶಬ್ಬೀರ ಸಾತಬಚ್ಚೆ, ಅಲ್ಲಾಬಕ್ಷ್ ಚಿಂಚಲಿ, ಸದಾಶಿವ ಮಾಂಗ. ಸುಭಾಷ್ ಸಾಳುಂಕೆ. ಶಂಕರ ಮುರಗುಂಡಿ, ಪರಶುರಾಮ್ ಮುರಗುಂಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕೆರೆ ತುಂಬಿಸುವ ಯೋಜನೆಗೆ ಶೀಘ್ರ ಚಾಲನೆ

**ಅಥಣಿ :** ತಾಲೂಕಿನ ಪೂರ್ವ ಭಾಗದ 9 ಕೆರೆಗಳನ್ನು ತುಂಬಿಸುವ 140 ಕೋಟಿ ರೂ. ವೆಚ್ಚದ ಯೋಜನೆಗೆ ಜೂ.30ರಂದು ಬೆಳಗ್ಗೆ 10 ಗಂಟೆಗೆ ಯಲ್ಲಮ್ಮವಾಡಿ ಕೆರೆಯಲ್ಲಿರುವ ಜಾಕ್‌ವೆಲ್ ಮೂಲಕ ಚಾಲನೆ ನೀಡಲಾಗುವುದು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.



ಅಥಣಿ ತಾಲೂಕಿನ ಯಕ್ಕಂಚಿ ಗ್ರಾಮದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 9 ಕೆರೆ ತುಂಬುವ ಯೋಜನೆ ಕಾಮಗಾರಿ ಪೂರ್ಣಗೊಂಡಿದ್ದು, ಈಗಾಗಲೇ ಯಲ್ಲಮ್ಮ ವಾಡಿ ಕೆರೆಗೆ ಕೃಷ್ಣಾ ನದಿಯಿಂದ ನೀರು ಹರಿಸಿ ಭರ್ತಿ ಮಾಡಲಾಗಿದೆ. ಇಲ್ಲಿಯ ಕೆರೆ ನೀರನ್ನು ಜಾಕ್‌ವೆಲ್ ಮೂಲಕ ಬಾಡಗಿ, ಐಗಳಿ, ಕೋಹಳ್ಳಿ, ಅಡಹಳ್ಳಿ, ಅಡಹಳ್ಳಟ್ಟಿ ಸೇರಿ ಉಳಿದ ಕೆರೆ ತುಂಬಿಸಲಾಗುವುದು. ಜನವರಿ 2026ಕ್ಕೆ ಕೊಟ್ಟಲಗಿ ಅಮ್ಮಾಜೇಶ್ವರಿ ಯೋಜನೆ ಹಂತ ಒಂದನ್ನು 1 ಸಾವಿರ ಕೋಟಿ ರೂ. ವೆಚ್ಚದಲ್ಲಿ ಇಂಟೆಕ್ ಕೆನಾಲ್, ಜಾಕವೆಲ್, ಪವರ್‌ಸ್ಟೇಶನ್ ರೈಸಿಂಗ್ ಮೇನ್, ಡಿಸ್ಟ್ರಿಬುಷನ್ ಪೂರ್ಣಗೊಂಡ ಬಳಿಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ ಅವರನ್ನು ಆಮಂತ್ರಿಸಿ ಯೋಜನೆಯನ್ನು ಲೋಕಾರ್ಪಣೆ ಮಾಡಲಾಗುವುದು ಎಂದರು.

ತಂತ್ರಜ್ಞಾನ ಅಳವಡಿಕೆ:

ಶ್ರೀ ಅಮ್ಮಾಜೇಶ್ವರಿ ಕೊಟ್ಟಲಗಿ ಯೋಜನೆ 2ನೇ ಹಂತದಲ್ಲಿ ರೈತರ ಭೂಮಿ ಅಳತೆಗೆ ತಕ್ಕಂತೆ ಅದಕ್ಕೆ ಬೇಕಾಗುವಷ್ಟು ನೀರನ್ನು ರೀಮೋಟ್ ಕಂಟ್ರೋಲ್ ಮೂಲಕ ಹೊಲಗಳಿಗೆ ಹಾಯಿಸಲು ಮತ್ತು ನೀರು ವ್ಯರ್ಥವಾಗುವುದನ್ನು ತಡೆಯುವ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಸಲಾಗುತ್ತಿದೆ. ಇದು ರಾಜ್ಯದಲ್ಲಿಯೇ ಪ್ರಥಮವಾಗಲಿದೆ ಎಂದರು.

ಅಥಣಿ ಕ್ಷೇತ್ರದ ಕೊಟ್ಟಲಗಿ ಗ್ರಾಮಕ್ಕೆ ಒಂದು ಪಶು ಆಸ್ಪತ್ರೆ ಮಂಜೂರಾಗಿದೆ. ಸಂಕ್ರಟ್ಟಿ ಮತ್ತು ಸಪ್ತಸಾಗರ ಗ್ರಾಮಗಳಲ್ಲಿ ಪಶು ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ತಲಾ 50 ಲಕ್ಷ ರೂ ಸರ್ಕಾರ ನೀಡಿದೆ ಎಂದು ತಿಳಿಸಿದರು.

ಈ ವೇಳೆ ಮುಖಂಡರಾದ ಅಮೋಘ ಬೋಬ್ರಿ, ಸಿದರಾಯ ನಾಯಿಕ, ಶಿವಾನಂದ ಗೊಲಬಾವಿ, ತುಕಾರಾಮ ಗೊಂದಳೆ ಇತರರು ಉಪಸ್ಥಿತರಿದ್ದರು.

# ಕೆಂಪೇಗೌಡರು ನಮಗೆಲ್ಲ ಆದರ್ಶವಾಗಿದ್ದಾರೆ



**ಧಾರವಾಡ:** ನಾಡ ಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಇಂದು ವಿಶ್ವ ಪ್ರಸಿದ್ಧಿಯಾಗಿದೆ. ಅವರ ದೂರದೃಷ್ಟಿಯಿಂದ ಬೆಂಗಳೂರು ಬೆಳೆದಿದೆ ಎಂದು ಕರ್ನಾಟಕ ವಿಧಾನ ಪರಿಷತ್ತ ಸಭಾಪತಿ ಬಸವರಾಜ ಹೊರಟ್ಟಿ ಅವರು ಹೇಳಿದರು.

ಅವರು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜರುಗಿದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ, ಮಾತನಾಡಿದರು.

ನಾಡುಪ್ರಭು ಕೆಂಪೇಗೌಡರ ಮುಂದಾಲೋಚನೆಯಿಂದ ಸಮಗ್ರ ಅಭಿವೃದ್ಧಿಯ ಬೆಂಗಳೂರು ನಿರ್ಮಾಣವಾಗಿದೆ. ಇಂದು ಬೃಹತ್ ಬೆಂಗಳೂರು ಆಗಿ ಬದಲಾಗಿದೆ. ಕೆಂಪೇಗೌಡರ ನಿಸ್ವಾರ್ಥ ಮತ್ತು ನಾಡಿನ ಕಳಕಳಿಯ ದ್ಯೋತಕವಾಗಿ ಬೆಂಗಳೂರು ಬೆಳೆದು ಬಂದಿದೆ ಎಂದು ಅವರು ಹೇಳಿದರು.

ಕೆಂಪೇಗೌಡರ ಬದುಕು, ಅಡಳಿತ ಮತ್ತು ಜೀವನ ಸಾಧನೆಗಳನ್ನು ಯುವಕರಿಗೆ, ವಿದ್ಯಾರ್ಥಿಗಳಿಗೆ ಪರಿಚಯಿಸುವ ಅಗತ್ಯವಿದೆ. ಮಕ್ಕಳಲ್ಲಿ ನಾಡಪ್ರಭು ಕೆಂಪೇಗೌಡರ ಗುಣಗಳನ್ನು ಬೆಳೆಸಬೇಕು. ಈ ನಿಟ್ಟಿನಲ್ಲಿ ಅವರ ಜೀವನಗಾಥೆಯನ್ನು ಶಾಲಾ ಪಠ್ಯದಲ್ಲಿ ಸೇರಿಸಿ, ಪರಿಣಾಮಕಾರಿ ಬೋಧನೆ ಮಾಡಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಗೀತಾ.ಸಿ.ಡಿ.ಅವರುಮಾತನಾಡಿ,ನಾಡಪ್ರಭುಕೆಂಪೇಗೌಡರು ಕನ್ನಡ ನಾಡಿನ ಹೆಮ್ಮೆ. ಬಡವರ ಒಡೆಯ ಮತ್ತು ಬೆಂಗಳೂರು ನಗರದ ಶಿಲ್ಪಿಯಾಗಿದ್ದಾರೆ. ಅವರು ಕೇವಲ ಒಂದು ನಗರ ನಿರ್ಮಾಪಕರಾಗಿಯಲ್ಲ, ಶ್ರೇಷ್ಠ ಆಡಳಿತಗಾರ, ಪ್ರಜಾಪಾಲಕ ಮತ್ತು ದೂರದೃಷ್ಟಿಯ ನಾಯಕರಾಗಿದ್ದರು ಎಂದು ಅವರು ಹೇಳಿದರು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆಳ್ವಿಕೆ ನಡೆಸಿದ್ದು, ತಮ್ಮ ಪ್ರತಿಭೆ ಮತ್ತು ಜಾಣ್ಮೆಯಿಂದ ಇತಿಹಾಸದಲ್ಲಿ ಅಮರರಾಗಿದ್ದಾರೆ. ಬೆಂಗಳೂರು ನಗರವನ್ನು ಅವರು ಯೋಜಿತವಾಗಿ ನಿರ್ಮಿಸಿದರು. ರಸ್ತೆ, ಮಾರುಕಟ್ಟೆ, ಕೆರೆ, ದೇವಾಲಯಗಳನ್ನು ಕಟ್ಟಿಸುವ ಮೂಲಕ ಜನಜೀವನ ಸುಲಭವಾಗುವಂತೆ ಮಾಡಿದರು ಎಂದು ಅಪರ ಜಿಲ್ಲಾಧಿಕಾರಿಗಳು ಹೇಳಿದರು.

ನಿವೃತ್ತ ಇತಿಹಾಸ ಪ್ರಾಧ್ಯಾಪಕ ಡಾ. ಬಸವರಾಜ ಅಕ್ಕಿ ಅವರು ನಾಡಪ್ರಭು ಶ್ರೀ ಕೆಂಪೇಗೌಡರ ಅವರ ಜೀವನ ಚರಿತ್ರೆ ಕುರಿತು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಎಸ್.ಕೆಳದಿಮಠ, ಸಹಾಯಕ ಪೊಲೀಸ್ ಆಯುಕ್ತ ಪ್ರಶಾಂತ ಸಿದ್ದನಗೌಡರ, ಸಿಪಿಐ ಶಿವಾನಂದ ಕಟಗಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ರಾಮಕೃಷ್ಣ ಸದಲಗಿ, ಅಶೋಕ ಸಿಂದಗಿ ಇದ್ದರು. ಕನ್ನಡ ಮತ್ತು ಸಂಸ್ಕತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಸ್ವಾಗತಿಸಿದರು. ನಾಡಪ್ರಭು ಶ್ರೀ ಕೆಂಪೇಗೌಡರ ಕುರಿತು ಹಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅವುಗಳಲ್ಲಿ ವಿಜೇತರಾದವರಿಗೆ ಕಾರ್ಯಕ್ರಮದಲ್ಲಿ ಪ್ರಮಾಣಪತ್ರ ಹಾಗೂ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಅಧಿಕಾರಿಗಳು, ವಿವಿಧ ಶಾಲೆಗಳ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಶಿಕ್ಷಕರು, ಸಾರ್ವಜನಿಕರು ಭಾಗವಹಿಸಿದ್ದರು.

# ಮಾದಕ ದ್ರವ್ಯ ವ್ಯಸನ ಮುಕ್ತ ದಿನಾಚರಣೆ: ಮಕ್ಕಳಿಗೆ ಪ್ರತಿಜ್ಞಾವಿಧಿ ಬೋಧನೆ



**ರಬಕವಿ–ಬನಹಟ್ಟಿ :** ಅಂತರಾಷ್ಟ್ರೀಯ ಮಾದಕ ದ್ರವ್ಯ ವ್ಯಸನ ಮುಕ್ತ ದಿನದ ಅಂಗವಾಗಿ ರಬಕವಿ–ಬನಹಟ್ಟಿ ತಾಲೂಕಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ಗುರುವಾರ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಬನಹಟ್ಟಿಯ ಎಸ್.ಆರ್.ಎ. ಮೈದಾನದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳ ಸಭೆಯಲ್ಲಿ ಪಾಲ್ಗೊಂಡು ಬನಹಟ್ಟಿಠಾಣೆಯಪಿಎಸ್ಐಶಾಂತಾಹಳ್ಳಿಮಾತನಾಡಿ, ಮಾದಕ ದ್ರವ್ಯ ವ್ಯಸನ ಮುಕ್ತ ರಾಷ್ಟ್ರ ನಿರ್ಮಾಣ ಮಾಡಲು ನಾವು ಗಾಂಜಾ, ಅಫೀಮುಗಳಂತಹ ಮಾದಕ ದ್ರವ್ಯಗಳನ್ನು ಸೇವಿಸಬಾರದು.

ಇತರರರು ಸೇವಿಸದಂತೆ ಶ್ರಮಿಸುತ್ತೇವೆಂದು ತಿಳಿಸಿದರು. ಅಕ್ರಮ ಮಾದಕ ದ್ರವ್ಯಗಳ ಬಗ್ಗೆ ಮಾಹಿತಿ ಬಂದಲ್ಲಿ ಪೊಲೀಸ್ ಸಹಾಯವಾಣಿ 112 ಕ್ಕೆ ಕರೆ ಮಾಡುವ ಮೂಲಕ ಮಾದಕ ದ್ರವ್ಯ ವ್ಯಸನ ಮುಕ್ತ ರಾಷ್ಟ್ರವನ್ನಾಗಿ ಮಾಡಲು ಪಣ ತೊಡಬೇಕೆಂದರು.

ಅಪ್ರಾಪ್ತ ವಯಸ್ಸಿನಲ್ಲಿ ಮಾದಕ ವ್ಯಸನಕ್ಕೆ ತುತ್ತಾದಲ್ಲಿ, ಆರೋಗ್ಯದ ಮೇಲೆ ಪರಿಣಾಮ ಬೀರಿ ಖಿನ್ನತೆಗೆ ಒಳಗಾಗುತ್ತಾರೆ. ಇದರಿಂದ ಮಕ್ಕಳ ಬೆಳವಣಿಗೆಯು ಕುಂಠಿತಗೊಳ್ಳುವದಲ್ಲದೇ ಕುಟುಂಬದ ಸ್ವಾಸ್ಥ್ಯ ಹಾಳಾಗುವದು.

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಸಾಧ್ಯವಾಗದೆಂದರು.

ಈ ಸಂದರ್ಭದಲ್ಲಿ ಎನ್. ಎಸ್. ಕಂಕಣಮೇಲಿ, ಬಿ. ಜಿ. ಜೋರಾಪುರ, ಡಾ. ಎಚ್. ಬಿ. ನದಾಫ್, ಆರ್. ಎಂ. ಉಕ್ಕಲಿ, ಎಂ.ಬಿ. ಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಶೈಕ್ಷಣಿಕ ಸೇವೆಯಲ್ಲಿ ರಾಯಲ್ ಪ್ಯಾಲೇಸ್ ಅಪೂರ್ವ ಸಾಧನೆ




**ಜಮಖಂಡಿ :** ರಾಯಲ್ ಪ್ಯಾಲೇಸ್ ಸಂಸ್ಥೆ ಕಳೆದ ಇಪ್ಪತ್ತು ವರ್ಷಗಳ ಶೈಕ್ಷಣಿಕ ಸೇವೆಯಲ್ಲಿ ಅಪೂರ್ವ ಸಾಧನೆ ಸಾಧಿಸುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷ, ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ನಗರದ ಪ್ರತಿಷ್ಠಿತ ರಾಯಲ್ ಪ್ಯಾಲೇಸ್ ಶಾಲೆಯ 21 ನೇ ಸಂಸ್ಥಾಪನಾ ದಿನ ಮತ್ತು ಶಾಲಾ ಸಂಸತ್ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು,ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮಿಗಳ ಆಶೀರ್ವಾದ, ಸಂಸ್ಥಾಪಕ ದಿವಂಗತ ಸಿದ್ದು ನ್ಯಾಮಗೌಡರ ದೂರದೃಷ್ಟಿ ಆಡಳಿತ ಮಂಡಳಿಯ ಮಾರ್ಗದರ್ಶನ, ಸಿಬ್ಬಂದಿಯವರ ಅವಿರತ ಪರಿಶ್ರಮ ಇದರಲ್ಲಿ ಅಡಗಿದೆ ಎಂದರು.

ದಿವಂಗತಸಿದ್ದುನ್ಯಾಮಗೌಡರಮಹತ್ವಾಕಾಂಕ್ಷೆಯಂತೆ ನಮ್ಮ ಸಂಸ್ಥೆ ಮೂಲಕ ಹೊಸ ಹೊಸ ವಿಭಾಗಗಳನ್ನು ಪ್ರಾರಂಭಿಸುತ್ತಿದ್ದೇವೆ.

ಪ್ರಸಕ್ತ ವರ್ಷದಿಂದ ಪಿಯುಸಿ ಕಲಾ ವಿಭಾಗ ಹಾಗೂ ಕಲಾ, ವಾಣಿಜ್ಯ, ವಿಜ್ಞಾನ ಮತ್ತು ಬಿ.ಸಿ.ಎ. ವಿಭಾಗದ ಕಾಲೇಜುಗಳನ್ನು ಪ್ರಾರಂಭಿಸಿದ್ದೇವೆ. ಶೈಕ್ಷಣಿಕ ಸಂಸ್ಥೆಯ ಬೆಳವಣಿಗೆಯಲ್ಲಿ ವಿದ್ಯಾರ್ಥಿಗಳ ಶ್ರಮ ಮತ್ತು ಪಾಲಕರ ಸಹಕಾರಕ್ಕೆ ನಾವು ಋಣಿಯಾಗಿದ್ದೇವೆ ಎಂದರು.

ಪ್ರಾಚಾರ್ಯೆ ರೀತಾ ಜೈನರ, ಭಾಗ್ಯಲಕ್ಷ್ಮಿ ಹಿರೇಮಠ ಹಾಗೂ ಶರಣಬಸವ ನಾಲವಾರ ಶಾಲಾ ಸಂಸತ್ಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಿದ್ಯಾರ್ಥಿಗಳಾದ ಮೀತ ಜೈನ, ಶಿಕ್ಷಕ ರಾಮಯ್ಯ ಪಾಲಬಾಂವಿಮಠ ತಮ್ಮ ಅನಿಸಿಕೆ ಹಂಚಿಕೊಂಡರು.

ವೇದಿಕೆಯಲ್ಲಿ ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಎನ್. ಎಂ. ರೊಳ್ಳಿ, ಶಾಲಾ ಆಡಳಿತ ವ್ಯವಸ್ಥಾಪಕ ಬಸವರಾಜ ನ್ಯಾಮಗೌಡ ಸಹಿತ ಹಲವರು ಹಾಜ–ರಿದ್ದರು.

ಶಾಲಾ ಸಂಸತ್ ಪದ ಗ್ರಹಣದ ನಿಮಿತ್ಯ ಆಕರ್ಷಕ ಪಥಸಂಚಲನ ನಡೆಯಿತು. ಮಕ್ಕಳಿಂದ ನೃತ್ಯ, ಯೋಗ ಮತ್ತು ಸಂಗೀತ ಕಾರ್ಯಕ್ರಮಗಳು ಜರುಗಿದವು. ರಾಜೇಶ್ವರಿ ನಾಯಕ ಪ್ರಾರ್ಥಿಸಿದರು. ತಾನಿಯಾ ಜೈನ ಸ್ವಾಗತಿಸಿದರು. ಜೈನಾ ಓಸ್ವಾಲ ನಿರೂಪಿಸಿ, ವಂದಿಸಿದರು.

# ಆದರ್ಶ ವಿದ್ಯಾಲಯಕ್ಕೆ ಅರ್ಜಿ ಆಹ್ವಾನ

**ಜಮಖಂಡಿ :** ತಾಲೂಕಿನ ಆಲಗೂರ ಆರ್. ಸಿ. ಯಲ್ಲಿರುವ ಸರಕಾರಿ ಆಂಗ್ಲ ಮಾಧ್ಯಮ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ.) ದಲ್ಲಿ ಸನ್ 2025–26 ನೇ ಸಾಲಿಗೆ 7, 8 ಮತ್ತು 9 ನೇ ತರಗತಿಗಳಲ್ಲಿ ಮೀಸಲಾತಿವಾರು ಖಾಲಿ ಇರುವ ಸೀಟುಗಳ ದಾಖಲಾತಿಗಾಗಿ ಪ್ರವೇಶ ಪರೀಕ್ಷೆನಡೆಯಲಿದ್ದು,ಅರ್ಹ ವಿದ್ಯಾರ್ಥಿಗಳಿಂದಅರ್ಜಿ ಆಹ್ವಾನಿಸಲಾಗಿದೆ. ಜುಲೈ 7 ರ ಮುಂಚಿತವಾಗಿ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ.) ಶಾಲೆಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಜುಲೈ 16 ರಂದು ಬೆಳಿಗ್ಗೆ 10–30 ರಿಂದ ಮಧ್ಯಾಹ್ನ 1–30 ರವರೆಗೆ ಆದರ್ಶ ವಿದ್ಯಾಲಯದಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದೆ. ಆದರ್ಶ ವಿದ್ಯಾಲಯದಲ್ಲಿ ಅರ್ಜಿ ಲಭಿಸಲಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಚಾರಿ ದೂರವಾಣಿ ಸಂಖ್ಯೆ 7411672048, 9916006936 ಸಂಪರ್ಕಿಸಬಹುದು ಎಂದು ಮುಖ್ಯ ಶಿಕ್ಷಕ ಪತ್ತಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಾರ್ಥನೆ ವೇಳೆಯಲ್ಲಿ ಶಿಕ್ಷಕನಿಗೆ ಹೃದಯಾಘಾತ



**ಜಮಖಂಡಿ :** ನಗರದ ತುಂಗಳ ಆಂಗ್ಲ ಮಾಧ್ಯಮ ಶಾಲೆಯ ಕನ್ನಡ ಭಾಷೆಯ ಶಿಕ್ಷಕ 48 ವಯಸ್ಸಿನ ನಾವಲಗಿ ಗ್ರಾಮದ ಗುರುಪಾದ ಕಾಶಿರಾಯ ಹಿಪ್ಪರಗಿ ಬೆಳಿಗ್ಗೆ ಪ್ರಾರ್ಥನೆ ವೇಳೆಯಲ್ಲಿ ತೀವ್ರ ಹೃದಯಾಘಾತದಿಂದ ಕುಸಿದು ಬಿದ್ದು ಸಾವನಪ್ಪಿರುವ ದುರಂತ ಘಟನೆ ಜರುಗಿದೆ.

ಕಳೆದ 13 ವರ್ಷದಿಂದ ತುಂಗಳ ಶಾಲೆಯಲ್ಲಿ ಸೇವೆ ಸಲ್ಲಿಸುವ ಮೂಲಕ ಎಲ್ಲ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಅಸು ನೀಗಿದರು.

ಶಿಕ್ಷಕನ ಅಗಲಿಕೆಗೆ ಜಮಖಂಡಿ ಮತ್ತು ನಾವಲಗಿ ಸುತ್ತಮುತ್ತಲಿನ ವಿದ್ಯಾರ್ಥಿಗಳು, ಗ್ರಾಮಸ್ಥರು ಶೋಕ ಸಾಗರದಲ್ಲಿ ಮುಳುಗಿದ್ದಾರೆ.

# ಲಯನ್ಸ ಸಂಸ್ಥೆ: ನೇತ್ರದಾನ, ದೇಹದಾನದ ಜಾಗೃತಿ ಗೋಡೆ ಬರಹ




**ಜಮಖಂಡಿ :** ನಗರದ ಮುಧೋಳ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯ ಆವರಣದಲ್ಲಿ ಲಯನ್ಸ ಸಂಸ್ಥೆ ವತಿಯಿಂದ ನೇತ್ರದಾನ ಹಾಗೂ ದೇಹದಾನದ ಮಹತ್ವದ ಕುರಿತು ಜಾಗೃತಿ ಗೋಡೆ ಬರಹ ಫಲಕವನ್ನು ನಾಡೋಜ ಡಾ. ಎಚ್. ಡಿ. ದಡ್ಡಿ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಲಯನ್ಸ್ ಸಂಸ್ಥೆ ಅಧ್ಯಕ್ಷ ಚಿನ್ಮಯ ಜಿರಲಿ, ಪ್ರಮುಖರಾದ ರಾಜು ಅಕ್ಕಿ, ಡಾ. ಕಮತೆ, ಡಾ. ಎಂ. ಪಿ. ತಾನಪ್ಪಗೋಳ, ರಾಜಶೇಖರ ಹೊಸಟ್ಟಿ, ವಿಜಯ ಕಟಗಿ, ರಮೇಶ ನಿಂಗಪ್ಪ ದೇವರವರ, ಮಲ್ಲು ಮಲಕನ್ನವರ, ಎಸ್. ಎಂ. ಕುಂಬಾರ, ರಾಜೇಂದ್ರ ನಾಯಕ ಪಾಲ್ಗೊಂಡಿದ್ದರು.

## ಮನಗೂಳಿ ಕೆನರಾ ಬ್ಯಾಂಕ್ ಚಿನ್ನಾಭರಣ ಕಳ್ಳತನ.!! ಮಾಜಿ ಮ್ಯಾನೇಜರ್ ಸೇರಿ ತ್ರಿವಳಿಗಳ ಹೆಡೆಮುರಿ ಕಟ್ಟಿದ ಗುಮ್ಮಟನಗರಿ ಪೊಲೀಸರು

# ಪ್ರಕರಣದ ರೋಚಕತೆ ಬಿಚ್ಚಿಟ್ಟ ಎಸ್.ಪಿ. ಲಕ್ಷ್ಮಣ ನಿಂಬರಗಿ: ಹತ್ತೂವರೆ ಕೆ.ಜಿ. ಚಿನ್ನ ವಶಕ್ಕೆ

ವರದಿ:ಲಾಲಸಾಬ ಸವಾರಗೋಳ

**ವಿಜಯಪುರ :** ಕಳೆದ ತಿಂಗಳು ನಡೆದ ರಾಜ್ಯದಲ್ಲಿಯೇ ಅತಿ ದೊಡ್ಡ ಮೊತ್ತದ ಬ್ಯಾಂಕ್ ಕಳವು ಪ್ರಕರಣ ಎಂದೇ ಗಮನ ಸೆಳೆದಿದ್ದ ಮನಗೂಳಿ ಕೆನರಾ ಬ್ಯಾಂಕ್ ಕಳವು ಪ್ರಕರಣದ ಹಿಂದಿನ ಹಲವು ರೋಚಕ ಅಂಶಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಎಳೆ ಎಳೆಯಾಗಿ ಬಿಚ್ಚಿಟ್ಟರು.

'ಮನಗೂಳಿ ಕೆನರಾ ಬ್ಯಾಂಕಿನ ಸೇಫ್ ಲಾಕರ್ನಲ್ಲಿದ್ದ 58.97 ಕೆ.ಜಿ ಚಿನ್ನಾಭರಣ ಮತ್ತು ?5.20 ಕೋಟಿ ನಗದು ಕಳವಿಗೆ ಅದೇ ಬ್ಯಾಂಕಿನ ಹಿಂದಿನ ಹಿರಿಯ ವ್ಯವಸ್ಥಾಪಕನಾಗಿದ್ದ ವಿಜಯಕುಮಾರ್ ಮಿರಿಯಾಲ ಮತ್ತು ಸಹಚರ ಆರೋಪಿಗಳು ಮೂರು ತಿಂಗಳ ಮೊದಲೇ ಕಳವಿಗೆ ಸಂಚು ರೂಪಿಸಿದ್ದರು ಎಂಬುದು ತನಿಖೆಯಿಂದ ತಿಳಿದು ಬಂದಿದೆ ಎಂದು ಹೇಳಿದರು.

'ಮೇ 9 ರವರೆಗೂ ಮನಗೂಳಿ ಕೆನರಾ ಬ್ಯಾಂಕಿನ ವ್ಯವಸ್ಥಾಪಕನಾಗಿದ್ದ ವಿಜಯಕುಮಾರ್ ಮಿರಿಯಾಲ, ಬಳಿಕ ಕೊಲ್ಹಾರ ತಾಲ್ಲೂಕಿನ ರೋಣಿಹಾಳ ಕೆನರಾ ಬ್ಯಾಂಕ್ ಶಾಖೆಗೆ ವರ್ಗಾವಣೆಯಾಗಿರುತ್ತಾನೆ. ಅದಕ್ಕೂ ಮೊದಲೇ ಅಂದರೆ ಮಾರ್ಚ್ ಮತ್ತು ಏಪ್ರಿಲ್ನಲ್ಲೇ ಬ್ಯಾಂಕಿನ ಸೇಫ್ ಲಾಕರ್ ಕೀಗಳನ್ನು ತನ್ನ ಸಹಚರ ಆರೋಪಿಗಳಿಗೆ ಕೊಟ್ಟು ನಕಲಿ ಕೀ ಮಾಡಿಸಿರುತ್ತಾನೆ. ಅಲ್ಲದೇ, ನಕಲಿ ಕೀಗಳು ಸರಿಯಾಗಿ ಕೆಲಸ ಮಾಡುತ್ತವೆಯೋ, ಇಲ್ಲವೋ ಎಂದು ಹಲವಾರು ಬಾರಿ ಬಳಸಿ (ಟೆಸ್ಟ್ ಅಂಡ್ ಟ್ರಯಲ್ ) ಖಚಿತ ಮಾಡಿಕೊಂಡಿರುತ್ತಾನೆ ಎಂದರು.

'ಮನಗೂಳಿ ಕೆನರಾ ಬ್ಯಾಂಕಿನಿಂದ ರೋಣಿಹಾಳ ಕೆನರಾ ಬ್ಯಾಂಕ್ ಶಾಖೆಗೆ ವರ್ಗಾವಣೆಯಾದ ಮೇಲೆ ಕಳ್ಳತನ ಮಾಡಲು ಯೋಜನೆ ರೂಪಿಸಿ, ಕಾಯುತ್ತಾನೆ. ಮೊದಲೇ ಮಾಡಿದರೆ ತನ್ನ ಮೇಲೆ ಸಂಶಯ ಬರುತ್ತದೆ ಎಂಬ ಕಾರಣ–ಕ್ಕೆ ಸುಮ್ಮನಾಗಿರುತ್ತಾನೆ. ಬ್ಯಾಂಕಿನಲ್ಲಿ ತನ್ನ ಸ್ಥಾನಕ್ಕೆ ಹೊಸ ವ್ಯವಸ್ಥಾಪಕ, ಸಿಬ್ಬಂದಿ ಸೇ–ರಿದಂತೆ ಹೊಸ ವ್ಯವಸ್ಥೆ ಬಂದ ಬಳಿಕವೇ ಕಳವು ಮಾಡಿದರೆ ಅವರ ಮೇಲೆ ಸಂಶಯ ಬರುತ್ತದೆ ಎಂದು ಯೋಚಿಸಿರುತ್ತಾನೆ ಎಂದರು.



ಲಕ್ಷ್ಮಣ ನಿಂಬರಗಿ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ
ವಿಜಯಪುರ

ವಿಜಯಕುಮಾರ್ ತಾನು ರೋಣಿಹಾಳಕ್ಕೆ ವರ್ಗಾವಣೆಯಾಗಿ ಹೋದ ಬಳಿಕ ಇತರೆ ಆರೋಪಿಗಳ ಜೊತೆ ಸೇರಿ ಹಲವಾರು ಸಲ ಮನಗೂಳಿ ಪಟ್ಟಣಕ್ಕೆ ಬಂದು, ಕಳವು ಹೇಗೆಲ್ಲ ಮಾಡಬೇಕು ಎಂದು ಸಂಚು ರೂಪಿಸುತ್ತಾನೆ. ಪಟ್ಟಣ ಮತ್ತು ಬ್ಯಾಂಕಿನಲ್ಲಿ ಎಲ್ಲೆಲ್ಲಿ ಸಿಸಿ ಟಿವಿಗಳಿವೆ, ಯಾವ ದಾರಿಯಲ್ಲಿ ಬರಬೇಕು, ಯಾವ ದಾರಿಯಲ್ಲಿ ಹೋಗಬೇಕು ಎಂಬುದನ್ನು ಮೊದಲೇ ನಿರ್ಧರಿಸಿರುತ್ತಾರೆ ಎಂದರು.

'ಆರಂಭದಲ್ಲಿ ಮೇ 23 ರಂದು ಬ್ಯಾಂಕ್ ಕಳವಿಗೆ ಮುಹೂರ್ತ ನಿಗದಿ ಮಾಡಿರುತ್ತಾರೆ. ಅಂ–ದು ಆರ್ಸಿಬಿ, ಸನ್ ರೈಸರ್ಸ್ ಹೈದರಾಬಾದ್ ನಡುವೆ ಐಪಿಎಲ್ ಪಂದ್ಯ ನಡೆದಿರುತ್ತದೆ. ಪಟ್ಟಣದ ಜನ ಪಂದ್ಯ ವೀಕ್ಷಣೆಯಲ್ಲಿ ಮಗ್ನರಾಗಿರುತ್ತಾರೆ. ಗೆದ್ದ ಬಳಿಕ ಯುವಕರು ಪಟಾಕಿ ಸಿಡಿಸುತ್ತಾರೆ. ಈ ಸಂದರ್ಭದಲ್ಲಿ ಪಟ್ಟಣದಲ್ಲಿ ಜನ ಸಂಚಾರ ಕಡಿಮೆ ಇರುತ್ತದೆ. ಆಗ ಕಳವು ಮಾಡುವುದು ಸುಲಭವಾಗುತ್ತದೆ ಎಂದು ಯೋಜನೆ ರೂಪಿಸಿರುತ್ತಾರೆ. ಆದರೆ, ಅವರು ಅಂದುಕೊಂಡಂತೆ ಹಾಗೆ ಆಗುವುದಿಲ್ಲ. ಪಂದ್ಯದಲ್ಲಿ ಆರ್ಸಿಬಿ ಸೋಲುತ್ತದೆ. ಜೊತೆಗೆ ಮಳೆಯೂ ಬರುವುದಿಲ್ಲ. ಹೀಗಾಗಿ ಅಂದಿನ ಯೋಜನೆ ಕೈಬಿಡುತ್ತಾರೆ.



ಬಳಿಕ ಮೇ 24 ರಂದು ಶನಿವಾರವಾಗಿರುವುದ–ರಿಂದ ಕಳವಿಗೆ ಮುಂದಾಗುತ್ತಾರೆ. ಅಂ–ದು ಬ್ಯಾಂಕಿನ ಸುತ್ತಮುತ್ತಲ ಪ್ರದೇಶದಲ್ಲಿ ಆರೋಪಿಗಳು ಹಲವಾರು ಬಾರಿ ಸುತ್ತಾಡಿರುವ ಚಲನವಲನ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕಳವಿಗೂ ಮುನ್ನ ಅಂದು ಬ್ಯಾಂಕಿನಲ್ಲಿರುವ ಸಿಸಿಟಿವಿ ಕ್ಯಾಮೆರಾಗಳ ಎನ್.ವಿ.ಆರ್. ತೆಗೆದುಕೊಂಡು ಹೋಗಿರುತ್ತಾರೆ. ಜೊತೆಗೆ ಹೈಮಾಸ್ಟ್ ವಿದ್ಯುತ್ ದೀಪಗಳ ವೈರ್ ಕಟ್ ಮಾಡಿರುತ್ತಾರೆ' ಎಂದರು.

"ಆರೋಪಿಗಳು ಬ್ಯಾಂಕ್ ಕಳವು ಸಂಬಂಧ ಸಾಕಷ್ಟು ರೀತಿಯ ಇಂಗ್ಲಿಷ್, ಹಿಂದಿ ಚಲನಚಿತ್ರಗಳನ್ನು, ನೆಟ್ಫ್ಲಿಕ್ಸ್, ಅಮೆಜಾನ್ನಲ್ಲಿ ಬರುವ ಕ್ರೈಂ ಸ್ಟೋರಿಗಳನ್ನು ನೋಡಿ ಅಧ್ಯಯನ ಮಾಡಿರುತ್ತಾರೆ. ಪೊಲೀಸ–ರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮಾಸ್ಕ್, ಹೆಲ್ಮೆಟ್ ಧರಿಸಿ, ತಮ್ಮ ವೇಷಭೂಷಣಗಳನ್ನು ಬದಲಾಯಿಸಿಕೊಂಡು, ತಮ್ಮ ಕುರುಹು ಎಲ್ಲಿಯೂ ಸಿಗದಂತೆ ಮೊದಲೇ ಯೋಜಿಸಿರುತ್ತಾರೆ' ಎಂದರು.

'ಕಳವು ಮಾಡಲು ತಂದ ವಾಹನಗಳನ್ನು ಯಾವ ರೀತಿ ಬಳಸಬೇಕು ಎಂಬುದನ್ನು ಮೊದಲೇ ಯೋಜಿಸಿರುತ್ತಾರೆ. ತಮ್ಮನ್ನು ಯಾರೂ ಗುರುತಿಸದಂತೆ ಮಾಡಲು ಪಟ್ಟಣದಲ್ಲಿ ಬೈಕುಗಳಲ್ಲಿ ತಿರುಗಾಡುತ್ತಾರೆ. ಬಳಿಕ ಆ ಬೈಕುಗಳು ಎಲ್ಲಿ ಹೋದವು ಎಂಬುದು ತಿಳಿಯದಂತೆ ಮಾಡಲು ಟ್ರಕ್ಗಳ ಮೂಲಕ ಬೇರೆಡೆಗೆ ಅವುಗಳನ್ನು ಸಾಗಿಸುತ್ತಾರೆ. ಈ ರೀತಿ ಸರಿಯಾದ, ಯೋಜನಾಬದ್ಧ ತಯಾರಿ ಮಾಡಿ ಸಿದ್ಧತೆ ಮಾಡಿಕೊಳ್ಳುತ್ತಾರೆ.

## 'ಮನಗೂಳಿ ಭಾಗ ಎರಡು ಶೀಘ್ರ'

**'ಮನಗೂಳಿ ಕೆನರಾ ಬ್ಯಾಂಕ್ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಹೇಳಿರುವುದು ಭಾಗ–ಒಂದು ಮಾತ್ರವಾಗಿದ್ದು ಶೀಘ್ರದಲ್ಲೇ ಪ್ರಕರಣದ ತನಿಖೆ ಪೂರ್ಣಗೊಳಿಸಿ ಇನ್ನುಳಿದ ಆರೋಪಿಗಳನ್ನು ಪತ್ತೆ ಹಚ್ಚಿ ಅವರ ಬಳಿ ಇರುವ ಉಳಿದ ಚಿನ್ನಾಭರಣವನ್ನು ಜಪ್ತಿ ಮಾಡಿದ ಬಳಿಕ ಮನಗೂಳಿ ಭಾಗ –ಎರಡನ್ನು ಬಹಿರಂಗ ಗೊಳಿಸಲಾಗುವುದು ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು.**



ವಾಮಾಚಾರ: 'ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ನಡೆದಂತ ಬ್ಯಾಂಕ್ ದರೋಡೆಗಳನ್ನು ಅಧ್ಯಯನ ಮಾಡಿರುತ್ತಾರೆ. ಬ್ಯಾಂಕ್ ಕಳವು ಮಾಡಿರುವವರು ತಮಿಳುನಾಡು, ಕೇರಳ ಕಡೆಯುವರು ಎಂದು ಪೊಲೀಸರು ತಿಳಿಯಲಿ ಎಂದು ದಿಕ್ಕು ತಪ್ಪಿಸಲು ಬ್ಯಾಂಕ್ ಆವರಣದಲ್ಲಿ ವಾಮಾಚಾರ ಮಾಡಿರುತ್ತಾರೆ.

ಪೊಲೀಸ್ ಶ್ವಾನದಳ, ಪೊಲೀಸ್ ಸ್ಕ್ವಾಡ್ನ ದಿಕ್ಕು ತಪ್ಪಿಸಲು ಕೈಗಳಿಗೆ ಗ್ಲೌಸ್ ಹಾಕಿಕೊಂಡು ಬೆರಳಚ್ಚು ಗುರುತು ಸಿಗದಂತೆಯೂ ಮಾಡಿರುತ್ತಾರೆ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ರಾಮನಗೌಡ ಹಟ್ಟಿ, ಡಿಎಸ್ಪಿ ಟಿ. ಎ. ಸುಲ್ಫಿ, ಸುನೀಲ ಕಾಂಬಳೆ, ಬಾಳಪ್ಪ ನಂದಗಾಂವಿ, ಸಿಪಿಐ ರಮೇಶ ಅವಜಿ, ಅಶೋಕ ಚವ್ಹಾಣ, ಗುರುಶಾಂತ ದಾಶ್ಯಾಳ, ಪಿಎಸ್ಐ ಶ್ರೀಕಾಂತ ಕಾಂಬಳೆ, ಅಶೋಕ ನಾಯಕ, ದೇವರಾಜ ಉಳ್ಳಾಗಡ್ಡಿ, ಬಸವರಾಜ ತಿಪ್ಪರೆಡ್ಡಿ, ರಾಕೇಶ ಬಗಲಿ, ಸೊಮೇಶ ಗೆಜ್ಜಿ, ವಿನೋದ ದೊಡಮನಿ, ವಿನೋದ ಪೂಜಾರಿ, ಶಿವಾನಂದ ಪಾಟೀಲ, ಯತೀಶ ಕೆ, ನಾಗರತ್ನ ಉಪ್ಪಲದಿನ್ನಿ ಮುಂತಾದವರು ತಪಾಸಣೆ ಮಾಡಿದರು.

**ಮೂವರೂ ಕಳ್ಳರು ಹುಬ್ಬಳ್ಳಿಯವರು:**

ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿ ಕೆನರಾ ಬ್ಯಾಂಕಿನ ಕಳವು ಪ್ರಕರಣದ ಮುಖ್ಯ ಆರೋಪಿ ವಿಜಯಕುಮಾರ್ ಮಿರಿಯಾಲ (41) ಚಂದ್ರಶೇಖರ ನೆರೆಲ್ಲಾ (38) ಮತ್ತು ಸುನೀಲ ಮೋಕಾ (40) ಮೂವರೂ ಹುಬ್ಬಳ್ಳಿ ಮೂಲದವರು. ಮುಖ್ಯ ಆರೋಪಿ ವಿಜಯಕುಮಾರ್ ಮಿರಿಯಾಲ ಸದ್ಯ ಕೊಲ್ಹಾರ ತಾಲ್ಲೂಕಿನ ರೋಣಿಹಾಳ ಕೆನರಾ ಬ್ಯಾಂಕಿನ ಹಿರಿಯ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಈತನ ಸಹಚರ ಆರೋಪಿಗಳಾದ ಚಂದ್ರಶೇಖರ ನೆರೆಲ್ಲಾ ಹುಬ್ಬಳ್ಳಿಯಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿಕೊಂಡಿರುತ್ತಾನೆ. ಜೊತೆಗೆ ಹುಬ್ಬಳ್ಳಿ ಕೇಶ್ವಾಪುರದಲ್ಲಿ ಸೇಂಟ್ ಆದ–ಕ್ರಾಸ್ ಸ್ಕೂಲ್ ನಡೆಸುತ್ತಿದ್ದಾನೆ. ಗುತ್ತಿಗೆದಾರ ಕ್ಯಾಸಿನೋ ನಡೆಸುವುದು, ಆಡುವುದು ಇವನ ಹವ್ಯಾಸವಾಗಿದೆ. ಒಮ್ಮೆ ಶ್ರೀಲಂಕಾದ ಕೊಲೊಂಬೊಕ್ಕೆ ಹೋಗಿ ಅಲ್ಲಿಯೂ ಕ್ಯಾಸಿನೊ ಆಡಿ ಬಂದಿರುತ್ತಾನೆ.

ಖಾಸಗಿ ಬ್ಯಾಂಕೊಂದರಲ್ಲಿ ಕೆಲಸ ಮಾಡಿ ಗೋಲ್ಮಾಲ್ ಮಾಡಿ ಅಮಾನತ್ತು ಆಗಿದ್ದಾನೆ. ಇನ್ನೊಬ್ಬ ಆರೋಪಿ ಸುನೀಲ್ ಮೋಕಾ ಆರೋಪಿ ಚಂದ್ರಶೇಖರ ನೆರೆಲ್ಲಾನ ಆಪ್ತನಾಗಿ ಕೆಲಸ ಮಾಡಿಕೊಂಡಿರುತ್ತಾನೆ. ಇಬ್ಬರೂ ಒಟ್ಟಿಗೆ ಹಲವಾರು ದಂಧೆ ಮಾಡಿಕೊಂಡು ಬಂದಿರುತ್ತಾರೆ.

# ಮಾದಕ ವಸ್ತು ಸೇವನೆಯಿಂದ ದೂರವಿರಿ: ಸಂಕನಾಳ

**ತಾಳಿಕೋಟೆ :** ಇಂದಿನ ಸಮೂಹ ದುಶ್ಚಟಗಳತ್ತ ವಾಲುತ್ತಾ ಸಿಗರೇಟ್, ಗುಟಕಾ, ತಂಬಾಕು, ಗಾಂಜಾ, ಅಲ್ಲದೇ ಇನ್ನಿತರ ಮಾದಕ ವಸ್ತುಗಳನ್ನು ತಮ್ಮ ಪ್ಯಾಶನ್ ರೀತಿಯಲ್ಲಿ ಸೇವನೆ ಮಾಡುತ್ತಾ ತಮ್ಮ ಜೀವನಕ್ಕೆ ಮುಳುವಾಗಿಸಿಕೊಳ್ಳುತ್ತಾ ಸಾಗಿರುವದು ದುರದೃಷ್ಟಕರ ಸಂಗತಿಯಾಗಿದ್ದು ಇಂತಹ ಮಾದಕ ವೆಸನಗಳಿಗೆ ದಾಸರಾಗಬಾರದೆಂದು ಸ್ಥಳೀಯ ಪೊಲೀಸ್ ಠಾಣಾ ಪಿಎಸ್ಐ ರಾಮನಗೌಡ ಸಂಕನಾಳ ಅವರು ಹೇಳಿದರು.




ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಸ್ಥಳೀಯ ಪೊಲೀಸ್ ಠಾಣೆಯವತಿಯಿಂದಏರ್ಪಡಿಸಲಾದಮಾದಕ ವಸ್ತುನಿಷೇದಕುರಿತುಜಾಗೃತಿಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ಮಾದಕ ವಸ್ತುಗಳಿಂದ ಇಡೀ ಜೀವನವೇ ನಾಶವಾಗಲಿದೆ ಈ ಚಟಕ್ಕೆ ಒಮ್ಮೆ ದಾಸರಾದರೆ ಅದರಿಂದ ಹೊರಬರಲು ಬಹಳೇ ಕಷ್ಟದಾಯಕವಾಗಿದೆ ಕೆಲವು ಕಡೆಗಳಲ್ಲಿ ಯುವಕರು ಒಂದು ಚಟ ತೇಜಿಸಲು ಮತ್ತೊಂದು ಚಟಕ್ಕೆ ದಾಸರಾಗುತ್ತಾರೆ ವಿದ್ಯಾರ್ಥಿ ಜೀವನವೆಂಬುದು ಸುಂದರ ಜೀವನವಾಗಿದೆ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಸಮಯ ಇದಾಗಿದೆ ಇಂತಹ ಮಾದಕ ವಸ್ತುಗಳ ಚಟಕ್ಕೆ ದಾಸರಾಗದೇ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರು.

ಅಪರಾಧ ವಿಭಾಗ ಪಿಎಸ್ಐ ಆರ್.ಎಸ್.ಭಂಗಿ ಅವರು ಮಾತನಾಡಿ ಇಂದಿನ ದಿನಮಾನದಲ್ಲಿ ಸೈಬರ್ ಕ್ರೈಂ ಎಂಬ ಪೇಡಂಭೂತಕ್ಕೆ ಸಾಕಷ್ಟು ಜನರು ವಂಚನೆಗೊಳಗಾಗುತ್ತಿದ್ದಾರೆ ಸಂಪರ್ಕಕ್ಕೆ ಸಿಗದ ಕರೆಗಳ ಮೂಲಕ ಓಟಿಪಿ ಪಡೆದು ಹಣವನ್ನು ವಂಚಿಸಿರುವ ಪ್ರಕರ್ಣಗಳು ಕಂಡುಬರುತ್ತಿವೆಸಾಮಾಜಿಕಜಾಲತಾಣಗಳನ್ನು ಬಳಸುವಾಗಲೂ ಎಚ್ಚರವಹಿಸಬೇಕೆಂದು ತಿಳಿ ಹೇಳಿದ ಅಧಿಕಾರಿ ಭಂಗಿ ಅವರು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಮೊದಲು ರಸ್ತೆ ನಿಯಮಗಳನ್ನು ತಿಳಿದುಕೊಳ್ಳಬೇಕು ರಸ್ತೆಯ ಮೇಲೆ ಸಂಚರಿಸುವಾಗ ಎಚ್ಚರವಹಿಸಬೇಕು ಮತ್ತು ಬಾಲ್ಯ ವಿವಾಹವೆಂಬುದು ಪೇಡಂಭೂತವಾಗಿ ಹಬ್ಬುತ್ತಿದೆ ಇನ್ನೂ ವಯಸ್ಕರಾಗದ ಮಕ್ಕಳನ್ನು ಮಧುವೆ ಮಾಡುವದು ಅಪರಾದವಾಗಿದೆ ಬಾಲ್ಯವಿವಾಹ ನಿಷೇದ ಕಾಯ್ದೆ ಅತ್ಯಂತ ಕಠಿಣವಾದುದ್ದಾಗಿದೆ ಇನ್ನೂ ತಿಳುವಳಿಕೆ ಇಲ್ಲದ ಮಕ್ಕಳಿಗೆ ಮಧುವೆ ಮಾಡುವದರಿಂದ ವಯಸ್ಕರಾದ ಮೇಲೆ ಮನೆಯಲ್ಲಿ ಸಮಸ್ಯೆಗಳ ಸರಮಾಲೆಯಿಂದಲೇ ಸಾಕಷ್ಟು ಕಡೆಗಳಲ್ಲಿ ಡೈವರ್ಸ್ ಹಂತಕ್ಕೆ ಬಂದಿರುವದು ಕಂಡಿದ್ದೇವೆಂದ ಅವರು ಪೊಲೀಸ್ ಇಲಾಖೆಯು ಮಕ್ಕಳ ಸಹಾಯಕ್ಕಾಗಿ ಸಹಾಯ ವಾಣಿ ಆರಂಬಿಸಿದೆ 1930ಗೆ ಕರೆ ಮಾಡಿ ಮಾಹಿತಿ ನೀಡಬೇಕು ನಿಮ್ಮ ಜೊತೆ ಪೊಲೀಸ್ ಇಲಾಖೆ ಸದಾ ಇರಲಿದೆ ಎಂದು ಲೈಂಗಿಕ ಕಿರುಕುಳ, ಮತ್ತು ಪೋಕ್ಸೋ ಕಾಯ್ದೆ, ಮಹಿಳೆಯರ ರಕ್ಷಣೆ, ಮಾದಕ ವಸ್ತುಗಳ ವೆಸನ ಕುರಿತು ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರು ಮುಖ್ಯೋಪಾಧ್ಯರಾದ ಸಂತೋಷ ಪವಾರ, ರಾಜು ಜವಳಗೇರಿ, ಭೀಮನಗೌಡ ಸಾಸನೂರ, ರಸೂಲಸಾ ತುರ್ಕನಗೇರಿ, ರವಿಕುಮಾರ ಮಲ್ಲಾಬಾದಿ,ಬಸವರಾಜಸವದತ್ತಿ,ಸಿದ್ದನಗೌಡ ಮೂದನೂರು, ಸಂಗಮೇಶ ಬಿರಾದಾರ, ಶರಣಗೌಡ ಕಾಚಾಪುರ, ಸಂಜೀವಕುಮಾರ ರಾಠೋಡ. ರೂಪಾ ಪಾಟೀಲ,
ಶಿವಲೀಲಾ ಚುಂಚನೂರ, ದೇವಿಂದ್ರ ಗುಳೆದ, ಅನಿತಾ ಚೌದ್ರಿ, ಸಂಗೀತ ಬಿರಾದಾರ, ಶಿವಕುಮಾರ ಕುಂಬಾರ, ಮೇಘಾ ಪಾಟೀಲ, ರಾಜಬಿ ಬಿದರಿ, ತನುಶ್ರೀ ಮಹೇಂದ್ರಕರ್, ಮಾರುತಿ ಕಾರ್ಬಾರಿ,
ದೇವರಾಜ್ ದೇಸಾಯಿ, ಶಂಕ್ರಮ್ಮ ಕಿರ್ದಹಳ್ಳಿ, ನಾಗರತ್ನ ಮೈಲೇಶ್ವರ, ಮುಬಿನ ಮುರಾಳ, ಬೋರಮ್ಮ ಜ್ಯೋತಿ ಪೊಲೀಸ ಪಾಟೀಲ, ಶೃತಿ ಚೌದರಿ, ರವಿಕುಮಾರ ಅನದಿನ್ನಿ, ಕುಮಾರ ಮೊಕಾಶಿ, ಹೀನಾಕೌಸರ ಸನದಿ, ಮುಬಾರಕ ಬನಹಟ್ಟಿ,ವಿಶ್ವನಾಥ್‌ಭಜಂತ್ರಿಮೊದಲಾದವರು ಇದ್ದರು.

# ಅಧಿಕಾರ ಶಾಶ್ವತವಲ್ಲ, ಮಾಡಿರುವ ಕಾರ್ಯ ಶಾಶ್ವತ: ಯತ್ನಾಳ

**ವಿಜಯಪುರ :** ಅಧಿಕಾರ ಶಾಶ್ವತವಲ್ಲ. ನಾವು ಮಾಡಿರುವ ಕೆಲಸ ಕಾರ್ಯಗಳು ಶಾಶ್ವತವಾಗಿ ಉಳಿಯುತ್ತವೆ. ಹಾಗೇ ವಿಜಯಪುರ ನಗರವನ್ನು ಮಾದರಿ ನಗರವನ್ನಾಗಿ ಅಭಿವೃದ್ಧಿ ಪಡಿಸಿ, ಜನರ ವಿಶ್ವಾಸ ಉಳಿಸಿಕೊಂಡಿರುವೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಹೇಳಿದರು.




ನಗರದ ವಾರ್ಡ್ ನಂ.33 ರ ಅತಾಲಟ್ಟಿ ಮುಖ್ಯ ರಸ್ತೆಯಿಂದ ಮದೀನಾ ನಗರದ ವರೆಗೆ ಮತ್ತು ಮದೀನಾ ನಗರದಿಂದ ಸಾಯಿ ನಗರದ ವರೆಗೆ ಸಿಸಿ ರಸ್ತೆ ಅಭಿವೃದ್ಧಿ ಪಡಿಸುವುದು ಹಾಗೂ ಅತಾಲಟ್ಟಿ ಮುಖ್ಯ ರಸ್ತೆಯಿಂದ ಮದೀನಾ ನಗರ ಮೂಲಕ ಸಾಯಿ ನಗರ ವರೆಗೆ ರೂ.1.5 ಕೋಟಿ ಅನುದಾನದಲ್ಲಿಆಂತರಿಕಒಳಚರಂಡಿಅಭಿವೃದ್ಧಿ ಪಡಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

2018ರ ಚುನಾವಣೆಯಲ್ಲಿ ನನ್ನ ಮೇಲೆ ಬಹುದೊಡ್ಡ ಸವಾಲ್ ಇತ್ತು. ನಗರದಲ್ಲಿ ಎಲ್ಲಿ ಹುಡುಕಿದರೂ ಒಂದು ಒಳ್ಳೆಯ ರಸ್ತೆ ಇರಲಿಲ್ಲ, ಚರಂಡಿ ವ್ಯವಸ್ಥೆಯೂ ಇರಲಿಲ್ಲ. ಎಲ್ಲಿ ನೋಡಿದರಲ್ಲಿ ಧೂಳು. ನಗರ ಜನತೆಯ ಆಶೀರ್ವಾದದಿಂದ ಗೆದ್ದು, ಧೂಳಾಪುರವನ್ನು ಮಾದರಿ ನಗರವನ್ನಾಗಿ ಅಭಿವೃದ್ಧಿ ಪಡಿಸಿ, ಜನರು ನನ್ನ ಮೇಲೆ ಇಟ್ಟ ವಿಶ್ವಾಸ ಉಳಿಸಿಕೊಂಡಿದಲ್ಲದೆ, ದೇಶದಲ್ಲೇ ಅತ್ಯಂತ ಶುದ್ಧ ಗಾಳಿ ಇರುವ ನಗರದ ಪಟ್ಟಿಯಲ್ಲಿ ವಿಜಯಪುರ ನಗರ 3ನೇ ಸ್ಥಾನಕ್ಕೆ ತಂದಿರುವ ಹೆಮ್ಮೆಯಿದೆ. ಇದುವೆ ನಾನು ಮಾಡಿರುವ ಅಭಿವೃದ್ಧಿಗೆ ಸಾಕ್ಷಿ ಎಂದರು.

ಸಾರ್ವಜನಿಕ ಉಪಯೋಗಕ್ಕೆ ಮೀಸಲಿಟ್ಟ ಜಾಗಗಳನ್ನು ಉದ್ಯಾನ, ಓಪನ್ ಜಿಮ್, ಯೋಗಾ ಕೇಂದ್ರ ಮತ್ತಿತರೆ ಸಾರ್ವಜನಿಕ ಉದ್ದೇಶಕ್ಕಾಗಿಯೇ ಬಳಸಬೇಕು. ಸ್ವತ ನಾನು ಉಪಯೋಗಿಸಲು ಬಂದರೂ ನನ್ನನ್ನೂ ಕೇಳಬೇಡಿ. ಯಾರಾದರೂ ಸಾರ್ವಜನಿಕ ಉದ್ದೇಶದ ಜಾಗ ಕಬಳಿಸಲು ಯತ್ನಿಸಿದರೆ ತಕ್ಷಣ ತಿಳಿಸಿ, ಸರಿಯಾಗಿ ಕ್ರಮ ಕೈಗೊಳ್ಳೋಣ ಎಂದು ಕಿವಿಮಾತು ಹೇಳಿದರು.

ಮಹಾನಗರಪಾಲಿಕೆಸದಸ್ಯರಾದಪ್ರೇಮಾನಂದ ಬಿರಾದಾರ, ರಾಜಶೇಖರ ಕುರಿಯವರ, ಬಿಜೆಪಿ ನಗರ ಮಂಡಲ ಮಾಜಿ ಅಧ್ಯಕ್ಷ ಶಂಕರ ಹೂಗಾರ, ಮುಖಂಡರಾದ ವಿಠ್ಠಲ ನಡುವಿನಕೇರಿ, ಆನಂದ ಹಂಜಿ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಇದ್ದರು.

# ಬಸವಣ್ಣನವರ ವಚನ ಇಂಗ್ಲಿಷ್‌ಗೆ ಭಾಷಾಂತರಿಸಿದ ಡಿ.ಎಸ್.ಪಿ ಯಲಗಾರ ಕಾರ್ಯ ಸ್ತುತ್ಯಾರ್ಹ: ಹವಾಲ್ದಾರ

**ವಿಜಯಪುರ :** ಡಿಎಸ್ಪಿ ಬಸವರಾಜ ಯಲಗಾರ ಬಸವಣ್ಣನವರ ವಚನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ನಾಡಿನ ಕೀರ್ತಿ ಹಾಗು ಘನತೆ ಹೆಚ್ಚಿಸುವ ಕಾರ್ಯ ಮಾಡಿದ್ದಾರೆಂದು ಕಸಾಪ ಸಂಘಟನಾ ಕಾರ್ಯದರ್ಶಿ ಮಹಮ್ಮದಗೌಸ ಹವಾಲ್ದಾರ ಅಭಿಪ್ರಾಯ ವ್ಯಕ್ತಪಡಿಸಿದರು.



ಮಂಗಳವಾರ ಮುಂಜಾನೆ ಡಿಎಸ್‌ಪಿ ಕಛೇರಿಗೆ ತೆರಳಿದ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಹಾಗು ವಚನ ಸಾಹಿತ್ಯ ಸಂಸ್ಕೃತಿ ವೇದಿಕೆಯ ಪದಾಧಿಕಾರಿಗಳು ಬಸವರಾಜ ಯಲಗಾರ ಅವರನ್ನು ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹಮ್ಮದಗೌಸ ಹವಾಲ್ದಾರ, ಇಂಗ್ಲಿಷ ಮಾಧ್ಯಮ ವಚನ ಸಾಹಿತ್ಯ ವಿಶ್ವಕ್ಕೆಲ್ಲ ಪರಿಚಯಿಸಿದ ಕೀರ್ತಿ ಬಸವರಾಜ ಯಲಗಾರ ಅವರಿಗೆ ಸಲ್ಲುತ್ತದೆ ಎಂದರು.

ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಅಭಿಷೇಕ ಚಕ್ರವರ್ತಿ ಮಾತನಾಡಿ, ಜಗತ್ತಿನ ಎಲ್ಲ ರಾಷ್ಟ್ರಗಳು ಬಸವಣ್ಣನವರ ವಚನಗಳನ್ನು ಸ್ವೀಕರಿಸುತ್ತಿದ್ದಾರೆ.

ಇಂತಹ ಅಪರೂಪದ ಸಂದರ್ಭದಲ್ಲಿ ಬಸವಣ್ಣನವರ ವಚನಗಳನ್ನು ಭಾಷಾಂತರ ಮಾಡುವ ಮೂಲಕ ಬಸವಣ್ಣನವರ ವಚನ ಸಾಹಿತ್ಯ ವಿಶ್ವಕ್ಕೆ ಪರಿಚಯಿಸುತ್ತಿರುವದು ನಾಡಿನ ಬಸವಾದಿ ಅನುಯಾಯಿಗಳು ಅತ್ಯಂತ ಸಂತೋಷ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ವಚನ ಸಾಹಿತ್ಯ ಸಂಸ್ಕೃತಿ ವೇದಿಕೆಯ ಅಧ್ಯಕ್ಷ ವಿ.ಎಸ್. ಖಾಡೆ ಮಾತನಾಡಿ, ಬಸವರಾಜ ಯಲಗಾರ ಅವರು ಪೊಲೀಸ ಇಲಾಖೆಯಲ್ಲಿ ಇದ್ದುಕೊಂಡು ಈ ಸಾಧನೆ ಮಾಡಿದ್ದು ಅತ್ಯಂತ ಸಂತೋಷದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ಪದಾಧಿಕಾರಿಗಳಾದ ಸಂಗಮೇಶ ಮೇತ್ರಿ, ವಿಜಯಲಕ್ಷ್ಮಿ ಹಳಕಟ್ಟಿ. ಎಸ್.ಎಂ. ಕಣಬೂರ, ಎನ್.ಆರ್. ಕುಲಕರ್ಣಿ, ಆಶಾ ಬಿರಾದಾರ,ಅಲ್ಲಮಪ್ರಭುಮಲ್ಲಿಕಾರ್ಜುನಮಠ, ಬಿ.ಎಂ. ಅಜೂರ, ಮಮತಾ ಮುಳಸಾವಳಗಿ ಮುಂತಾದವರು ಉಪಸ್ಥಿತರಿದ್ದರು.

# ಸ್ವಾಗತ ಮತ್ತು ಬೀಳ್ಕೊಡುಗೆ ಸಮಾರಂಭ

**ವಿಜಯಪುರ :** ಜಿಲ್ಲೆಯ ಕೊಲ್ಹಾರ ತಾಲೂಕಿನ ಮುಳವಾಡ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿಆಯ್ಕೆಯಾದವರಿಗೆ ಮತ್ತು ನಿವೃತ್ತರಾದ ಕೆ.ಎ. ಮುಜಾವರ ಮುಖ್ಯಗುರುಗಳಿಗೆ ಸನ್ಮಾನಿಸಲಾಯಿತು. .



ಕೊಲ್ಹಾರ ಕ್ಲಸ್ಟರಾದ ಎಲ್ಲ ಶಾಲಾ ಮುಖ್ಯ ಗುರುಗಳು ಹಾಗೂ ಊರಿನ ಗಣ್ಯರು ಹಿರಿಯರು ಅಂಜುಮನ್ ಸಮಿತಿಯ ಅಧ್ಯಕ್ಷರು ಸದಸ್ಯರು ಹಾಗೂ ಕಾರ್ಯದರ್ಶಿಗಳು, ಎಸ್‌ಡಿಎಂಸಿ ಕಮಿಟಿಯ ಸದಸ್ಯರು ಸೇವಾ ನಿವೃತ್ತಿ ಹೊಂದಿದ ಕೆ.ಎ. ಮುಜಾವರ ಮುಖ್ಯ ಗುರುಗಳಿಗೆ ಬೀಳ್ಕೊಡುಗೆ ಮತ್ತು ಹೊಸದಾಗಿ ಬಂದ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರಿಗೆ ಮತ್ತು ಸಿಆರ್‌ಪಿ ಮಕಾಂದರ್ ಇವರಿಗೆ, ಮುಂಬರುವ ಶಿಕ್ಷಕರು ಸಬೀರ್ ತಾಂಬೋಳಿ ಶಿಕ್ಷಕರಿಗೆ ಅದ್ದೂರಿ ಸ್ವಾಗತ ಮಾಡಲಾಯಿತು. ಊರಿನ ಜಮಾತಿನವರು ಕೂಡಿಕೊಂಡು ಈ ಸಮಾರಂಭವನ್ನು ಬಹಳ ಅದ್ದೂರಿಯಾಗಿ ನೆರವೇರಿಸಲಾಯಿತು.

# ಮಲ್ಲಯ್ಯ ಅಪ್ಪಯ್ಯ ಹಿಟ್ಟಿನಮಠ ನಿಧನ



**ಮಹಾಲಿಂಗಪುರ :** ಪಟ್ಟಣದ ಬರಗಿ ಓಣಿಯ ನಿವಾಸಿ, ಜಂಗಮ ಸಮಾಜದ ಹಿರಿಯಜೀವಿ ಮಲ್ಲಯ್ಯ ಅಪ್ಪಯ್ಯ ಹಿಟ್ಟಿನಮಠ ತಮ್ಮ 86 ನೆಯ ವಯಸ್ಸಿನಲ್ಲಿ ಜೂನ್ 26 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಮೂವರು ಪುತ್ರಿಯರು, ಸೈದಾಪೂರ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಸೇರಿದಂತೆ ಮೂವರು ಸುಪುತ್ರರು, ಮೊಮ್ಮಕ್ಕಳು, ಮರಿಮಕ್ಕಳು, ಕಿರಿ ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸಂತಾಪ : ಮೃತರ ನಿಧನಕ್ಕೆ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ, ಪಿ. ಸಿ. ಗದ್ದಿಗೌಡರ, ಅಬಕಾರಿ ಸಚಿವ ಆರ್. ಬಿ. ತಿಮ್ಮಾಪೂರ, ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ,ಮುಖಂಡರಾದಸಿದ್ದು ಕೊಣ್ಣೂರ, ಬಸನಗೌಡ ಪಾಟೀಲ, ಯಲ್ಲನಗೌಡ ಪಾಟೀಲ, ಆರ್. ಟಿ. ಪಾಟೀಲ, ಬಸವರಾಜ ರಾಯರ, ಪ್ರಲ್ಹಾದ ಸಣ್ಣಕ್ಕಿ, ರವಿ ಜವಳಗಿ, ಬಸವರಾಜ ಚಮಕೇರಿ, ಚನ್ನಪ್ಪ ರಾಮೋಜಿ, ಮಹಾಲಿಂಗಪ್ಪ ಸನದಿ, ಬಸವರಾಜ ನಾಗನೂರ ಸೇರಿದಂತೆ ಬಾಗಲಕೋಟೆ ಜಿಲ್ಲೆ ಮತ್ತು ಸೈದಾಪೂರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಹಲವು ಗ್ರಾಮಗಳ ಮುಖಂಡರು ಸಂತಾಪ ಸೂಚಿಸಿದ್ದಾರೆ.

# ಮಹಿಳೆಯರು ಅಬಲೆಯರೆಲ್ಲ ಸಬಲೆಯರು ಕೌಶಲ್ಯ ನೀಡಿದರೆ ಏನಾದ್ರೂ ಸಾಧಿಸಲು ಸಾಧ್ಯ

**ಬಾದಾಮಿ :** ಗ್ರಾಮೀಣಾಭಿರುದ್ಧಿ ಕ್ಷೇತ್ರದಲ್ಲಿ ಸ್ವ ಉದ್ಯೋಗ ತರಬೇತಿ ನೀಡುತ್ತಿದೆ, ಅಲ್ಲದೇ ಮಹಿಳೆಯರನ್ನು ಸ್ವಾವಲಂಬಿಯಾಗಿ ಜೀವನೋಪಾಯದ ವ್ಯವಸ್ಥೆಗೆ ಕೌಶಲ್ಯಾಧಾರಿತ ತರಬೇತಿ ತುಂಬಾ ಅವಶ್ಯಕವಾಗಿದೆ ಭಾರತೀಯ ವಿಕಾಸ ಟ್ರಸ್ಟ್ ಕೌಶಲ್ಯಾಧಾರಿತ ತರಬೇತಿಗಳಾದ ಆರಿ ಎಂಬ್ರೈಡಿಂಗ್, ಸ್ಯಾರಿ ಕುಚ್,ಸ್ಯಾರಿ ಡ್ರಾಪಿಂಗ್, ಮೆಹಂದಿ, ಕರಕುಶಲ ವಸ್ತುಗಳ ತಯಾರಿಕೆ ಬ್ಯಾಂಗಲ್ಸ್ ಡಿಸೈನ್ ಮತ್ತಿತರ ವಿಶೇಷ ಸ್ವಉದ್ಯೋಗದ ತರಬೇತಿ ನೀಡುತಿದೆ ಎಂದು ಭಾರತೀಯ ವಿಕಾಸ ಟ್ರಷ್ಟ ಮುಖ್ಯಸ್ಥ ಮನೋಹರ್ ಕಟಗೇರಿ, ಹೇಳಿದರು.




ಬಾದಾಮಿ ತಾಲೂಕಿನ ಚೋಳಚಗುಡ್ಡ ಗ್ರಾಮದಲ್ಲಿ ಎಮ್.ಪಿ.ಐ ಮಣಿಪಾಲ ಪೇಮೆಂಟ್ ಮತ್ತು ಐಡೆಂಟಿಟಿ ಸೆಲ್ಯೂಷನ್ ಲಿಮಿಟೆಡ್' ರ ಪ್ರಯೋಜಿಕತ್ವದಲ್ಲಿ ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಹಾಗೂ ಶ್ರೀ ಚೈತನ್ಯ ಮಹಿಳಾ ಸಂಜೀವಿನಿ ಒಕ್ಕೂಟ ಚೋಳಚಗುಡ್ಡ ಹಾಗೂ ಸೆಲ್ಕೋ ಸೋಲಾರ್ ಲೈಟ್ ರ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು

ಗ್ರಾಮದ ಹಿರಿಯರಾದ ವೀರಣ್ಣ ಸಾತಣ್ಣನವರ, ಮನೋಹರ್ ಇಳಿಗೇರ, ಶಿವನಿ ದೇಸಾಯಿ, ಶಿವಕುಮಾರ್ ಕೆ ಮಾತನಾಡಿ ಮಾತನಾಡಿ ಮಹಿಳೆಯರು ಅಬಲೆಯರೆಲ್ಲ ಸಬಲೆಯರು ಅವರಿಗೆ ಕೌಶಲ್ಯ ನೀಡಿದರೆ ಏನಾದ್ರೂ ಸಾಧಿಸಬಹುದು, ಆಹಾರ ಉತ್ಪನ್ನಗಳಾದ ಚಿಪ್ಸ್ ಚಕ್ಕಲಿ, ಶಾವಿಗೆ ಕಾರಕುಟ್ಟುವುದು ರೊಟ್ಟಿ ತಯಾರಿಕೆ, ಜೆರಾಕ್ಸ್ ಬೀದಿಬದಿಯ ವ್ಯಾಪಾರ, ಕೃಷಿ ಕ್ಷೇತ್ರದಲ್ಲಿ ಮೌಲ್ಯಧಾರಿತ ತಂತ್ರಜ್ಞಾನ ಮತ್ತಿತರ ಸ್ವ ಉದ್ಯೋಗಕ್ಕೆ ಸಹಾಯವಾಗಿ ಸೌರ ತಂತ್ರಜ್ಞಾನ ಬಳಕೆ ಮತ್ತು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಮಾದರಿ ಯಶಸ್ವಿ ಉದ್ದಿಮೆದಾರರಾಗ ಬೇಕೆಂದು ಕರೆ ನೀಡಿದರು.

ಚೈತನ್ಯ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ಗೀತಾ ಹಂಪಿ ಹೋಳಿಮಠ, ಅನುರಾಧ ದೊಡ್ಡಮನಿ, ಮಾತನಾಡಿ ನಮ್ಮ ಚೊಳಚಗುಡ್ಡ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಮ್ಮ ಚೈತನ್ಯ ಸಂಜೀವಿನಿ ಮಹಿಳಾ ಒಕ್ಕೂಟವು ಮಾದರಿ ಒಕ್ಕೂಟವಾಗಿದ್ದು ಸ್ವ ಸಂಘದ ಸದಸ್ಯರ ಜೀವನ ನಿರ್ವಹಣೆಯನ್ನು ಮಾಡಲು ಈಗಾಗಲೇ ಆರಿ ಕಸುತಿ, ಜೂಟ್ ಬ್ಯಾಗ್ ತಯಾರಿಕೆ, ಬ್ಯಾಂಗಲ್ಸ್ ಡಿಸೈನ್ ಮತ್ತಿತರ ಸ್ವಉದ್ಯೋಗದ ತರಬೇತಿಯನ್ನು ನೀಡಿ ಸ್ವ ಸಹಾಯ ಸಂಘದ ಸದಸ್ಯರ ಜೀವನೋಪಾಯಕ್ಕೆ ಅನುಕೂಲಕರವಾಗಿದೆ ಗ್ರಾಮ ನಗರ ಕುಟುಂಬ ಅಭಿವೃದ್ಧಿಗೊಳ್ಳಲು ಸಹಾಯವಾಗುತ್ತದೆ ಎಂದು ಹೇಳಿದರು.

# ವಿದ್ಯಾರ್ಥಿಗಳು ಅಧ್ಯಯನದ ಜತೆಗೆ ಯೋಗದಲ್ಲಿ ತಲ್ಲಿನರಾಗಿ: ಡಾ. ಕಾಂಬಳೆ

**ಜಮಖಂಡಿ :** ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ಯೋಗದಲ್ಲಿ ತಲ್ಲಿನರಾದರೆ ಉತ್ತಮ ಆರೋಗ್ಯಕರ ಬೆಳವಣಿಗೆ ಕಾಣಬಹುದು. ಸ್ವಯಂ ಪ್ರೇರಿತರಾಗಿ ಯೋಗವನ್ನು ಅಪ್ಪಿಕೊಂಡು ಮನಸೋತರೆ ಖಂಡಿತ ಸದೃಢ ಆರೋಗ್ಯ ಸಾಧ್ಯ ಎಂದು ವೈದ್ಯಾಧಿಕಾರಿ ಡಾ. ಮುಕುಂದ ಕಾಂಬಳೆ ಹೇಳಿದರು.



ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಗದುಗಿನ ತೋಂಟದಾರ್ಯ ವಿದ್ಯಾಪೀಠ ಸಂಸ್ಥೆಯ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಹನ್ನೊಂದನೇ ವಿಶ್ವ ಯೋಗ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಯೋಗಕ್ಕೆ ಆಧ್ಯಾತ್ಮಿಕ ಲೇಪನ, ಪುರಾತನ ಇತಿಹಾಸವಿದೆ.

ಆರೋಗ್ಯ ಪುಷ್ಟಿ ಪುಟಿದೇಳಿಸುವ ಶಕ್ತಿ ಹೊಂದಿದೆ. ಪತಂಜಲಿ ಋಷಿಮುನಿಗಳ ಕೊಡುಗೆಯೆ ಯೋಗ ಸಂಜೀವಿನಿ. ಅಂದಿನಿಂದ ಇಂದಿನವರೆಗೆ ತನ್ನದೇಯಾದ ಮೌಲ್ಯ ಉಳಿಸಿಕೊಂಡು ಆಧುನಿಕ ಯುಗದಲ್ಲಿ ವ್ಯಾಪಕ ಜನಪ್ರಿಯತೆ ಪಡೆಯುತ್ತಿದೆ. ದೈಹಿಕ ಭಾವನೆಗಳ ಸಮತೋಲನ ಹತೋಟಿಗೆ ಯೋಗ ಮಹತ್ತರ ಪಾತ್ರ ವಹಿಸುತ್ತದೆ.

ಶಿಸ್ತಿನ ಆರೋಗ್ಯಕ್ಕೆ ಯೋಗ ಅವಶ್ಯಕವಾಗಿದೆ. ಉತ್ತಮ ಜೀವನಾಧಾರಿತ ಬದುಕು ಕಟ್ಟಿಕೊಳ್ಳಲು ಪೂರಕವಾಗಿದೆ ಎಂದರು.

ಪ್ರಭಾರ ಮುಖ್ಯಶಿಕ್ಷಕ ಬಸವರಾಜ ಜಾಲೋಜಿ ಮಾತನಾಡಿ, ಯೋಗ ದಿನದಂದು ಮಾತ್ರ ಯೋಗದ ಕುರಿತು ಪ್ರೀತಿ, ಕಾಳಜಿ ತೋರುವುದು ಸರಿಯಲ್ಲ. ನಿತ್ಯವೂ ದೇಹ, ಶರೀರವನ್ನು ಯೋಗಾನಂದದಲ್ಲಿ ತೇಲಿಸಬೇಕು. ಯೋಗಾಭ್ಯಾಸದ ಜೊತೆಗೆ ಉತ್ತಮ ಹವ್ಯಾಸಗಳು ಮೈಗೂಡಿಸಿಕೊಂಡು ಯುವ ಜನತೆ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಶಿಕ್ಷಕ ಸುರೇಶ ಸಂತಿ ಮಾತನಾಡಿದರು. ಈ ಸಂದರ್ಭದಲ್ಲಿ
ಮಡಿವಾಳ ಮಾಚಿದೇವ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಚಾರ್ಯ ರಾಯಪ್ಪ ಸಣಮನಿ, ಶಿವಶರಣ ಹರಳಯ್ಯ ಸ್ಮಾರಕ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಎಸ್. ಎಸ್. ಅರಬಳ್ಳಿ, ಎಸ್. ಜಿ. ಬಾಳೇಕುಂದ್ರಿ, ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಮಾಲಾ ಕಲ್ಯಾಣಿ, ನಿವೃತ್ತ ದೈಹಿಕ ಶಿಕ್ಷಕ ಬಸವರಾಜ ಅನಂತಪೂರ,ಸದಾಶಿವಹೊಸಮನಿ,ಸದಾಶಿವ ಬೋದ್ಲಿ, ಮಲ್ಲಯ್ಯ ಮಠಪತಿ, ಹಣಮಂತ ಗದಿಗೆಪ್ಪಗೋಳ, ಈರಪ್ಪ ದೇಸಾಯಿ, ಲೋಹಿತ ಮಿರ್ಜಿ, ಶ್ರೀಶೈಲ ಹುಣಶಿಕಟ್ಟಿ, ಸಹನಾ ಹತ್ತಳ್ಳಿ, ಶೋಭಾ ಹಿರೇಮಠ, ಸುನಂದಾ ಬಬಲಾದಿಮಠ, ಭಾಗ್ಯಶ್ರೀ ವಿಭೂತಿಮಠ, ಚಂಪಾ ದೇಯಗೊಂಡ, ರೇಶ್ಮಾ ಕನಾಳ, ರೇಣುಕಾ ಲಾಳಸಂಗಿ, ಪೂಜಾ ಜಾಡರ, ಅಶ್ವಿನಿ ಕಲ್ಯಾಣಿ, ಮಾಲಾ ಯಣಗಾಯಿ, ಶಾಂತಾ ರೋಣಿಹಾಳ, ಲಕ್ಕವ್ವ ಸವದಿ, ಕಸ್ತೂರಿ ಪಟ್ಟಣಶೆಟ್ಟಿ, ಶಾಯಿನ ಗೆಣ್ಣೂರ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

ವಾಣಿಶ್ರೀ ಸೌದಿ ಪ್ರಾರ್ಥಿಸಿದರು. ಬಸವರಾಜ ಅನಂತಪುರ ಸ್ವಾಗತಿಸಿದರು. ಶೃತಿ ಲಿಗಾಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುರೇಶ ಸಂತಿ ನಿರೂಪಿಸಿದರು. ಕುಮಾರಿ ವಾಣಿ ವಂದಿಸಿದರು.

# 124 ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ವಿರೋಧಿಸಿ ಮನವಿ



**ಹೊಸಪೇಟೆ :** ತುಂಗಭದ್ರಾ ಯೋಜನೆ ಹಾಗೂ ವಿಜಯನಗರ ಕಾಲುವೆಗಳ 124 ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ವಿರೋಧಿಸಿ
ಕರ್ನಾಟಕರಾಜ್ಯರೈತಸಂಘದಹೊಸಪೇಟೆತಾಲೂಕು ಅಧ್ಯಕ್ಷರಾದ ಗಂಟೆ ಸೋಮಶೇಖರ್ ಮತ್ತು ಸಂಘದ ಎಲ್ಲಾ ಪದಾಧಿಕಾರಿಗಳು ಪತ್ರಿಕೆ ಹೇಳಿಕೆಯನ್ನು ವಿರೋಧಿಸಿ ಮನವಿಯನ್ನು ಸಲ್ಲಿಸಿದ್ದಾರೆ,

ತುಂಗಭದ್ರಾ ಯೋಜನೆಯ ಮತ್ತು ವಿಜಯನಗರ ಕಾಲುವೆಗಳ 124ನೇ ನೀರಾವರಿ ಸಲಹಾ ಸಮಿತಿ ಸಭೆ ಇಂದು 27.06.2025 ರಂದು ನಡೆಯಲಿದೆ ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿರುತ್ತಾರೆ.

ಅಧೀಕ್ಷಕ ಅಭಿಯಂತರರು ಎಲ್ಲಾ ಫ್ಯಾಕ್ಟರಿಗಳಿಗೆ ಮತ್ತು ಎಲ್ಲಾ ರಾಜಕೀಯ ತಮ್ಮ ತಮ್ಮಗಳ ಲಾಭಕ್ಕಾಗಿ ವಿಧಾನ ಸೌಧದ ಮಹಡಿಯಲ್ಲಿ
ಈ ರೀತಿಯಾಗಿ ತುಂಗಭದ್ರ ಯೋಜನೆಯ ಸಭೆಯನ್ನು ಆಯೋಜಿಸಿರುತ್ತಾರೆ. ಇದನ್ನು ನಮ್ಮ ಸಂಘ ಖಂಡಿಸಿದ್ದು ಇದನ್ನು ಈ ಕೂಡಲೇ ವಿರೋಧಿಸಿರುತ್ತೇವೆ.

124ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ಪ್ರತೀ ವರ್ಷದಂತೆ ಈ ವರ್ಷ ಕೂಡ ಮುನಿರಾಬಾದ್‌ನಲ್ಲಿ ಅದರ ವಿಷಯಗಳು ತಿರ್ಮಾನವಾಗಬೇಕು.ಮತ್ತು ಯಾವುದೇ ರೀತಿಯಾಗಿ ರಾಜಕೀಯ ಒತ್ತಡವಿಲ್ಲದೆ ರೈತರ ಸಮಕ್ಷಮದಲ್ಲಿಯೇ 124 ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ನಡೆಸಬೇಕೆಂದು ಒತ್ತಾಯಿಸಿದ್ದಾರೆ.

**ವರದಿ ಅಂಬರೀಶ್ ನಾಯಕ್**

# ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ ಆಚರಣೆ



**ಹೊಸಪೇಟೆ :** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ವಿಜಯನಗರ ಜಿಲ್ಲೆ ಇವರ ಆಶ್ರಯದಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವನ್ನು ಜಿಲ್ಲಾ ಜನಜಾಗೃತಿ ವೇದಿಕೆಯ ಕೋಶಾಧಿಕಾರಿ ಕೆ, ಪ್ರಕಾಶ್, ತಾಲೂಕು ಯೋಜನಾಧಿಕಾರಿಗಳಾದ ಮಂಜುನಾಥ ನಾಯಕ್, ಸಂಪನ್ಮೂಲ ವ್ಯಕ್ತಿಯಾದ ವೆಂಕಟೇಶ್ ಅವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.ಸಂಪನ್ಮೂಲ ವ್ಯಕ್ತಿಯಾದ ವೆಂಕಟೇಶ್ ಅವರು ಮಾತನಾಡಿ ತಂಬಾಕು ಎನ್ನುವಂತಹ ವಿಷಕಾರಿ ಪದಾರ್ಥವು ಇಂದಿನ ಯುವ ಪೀಳಿಗೆಯ
ಮೇಲೆ ಸವಾರಿ ಮಾಡುತ್ತಿದ್ದು ಚಿಕ್ಕ ಚಿಕ್ಕ ವಯಸ್ಸಿನಲ್ಲಿ ಇಂದಿನ ಯುವಕರು ತಮ್ಮ ಅಮೂಲ್ಯವಾದ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ ಆದ್ದರಿಂದ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎನ್ನುವಂತೆ ಮಕ್ಕಳಿಗೆ ಆರಂಭದಲ್ಲೇ ಉತ್ತಮ ಸಂಸ್ಕಾರ ನೀಡಬೇಕು ಎಂದರು ತಾಲೂಕು ಯೋಜನಾಧಿಕಾರಿ ಮಂಜುನಾಥ್ ನಾಯಕ್ ಅವರು ಮಾತನಾಡಿ ಧರ್ಮಸ್ಥಳ ಸಂಸ್ಥೆಯು ಕೇವಲ ಸಾಲ ಕೊಡಿಸುವ ಸಂಸ್ಥೆಯಲ್ಲ ಸಮಾಜಪರ ಚಿಂತನೆಯುಳ್ಳ ಹಾಗೂ ಕಾಳಜಿಉಳ್ಳಮಾತೃಹೃದಯಿಸಂಸ್ಥೆಯಾಗಿದೆಎಂದರು. ಜಿಲ್ಲಾ ಜಲ ಜಾಗೃತಿ ವೇದಿಕೆಯ ಕೋಶಾಧಿಕಾರಿ ಕೆ ಪ್ರಕಾಶ್ ಅವರ ಮಾತನಾಡಿ ಕಳೆದ 13 ವರ್ಷಗಳಿಂದ ಸಂಸ್ಥೆಯು ಮಾಡುತ್ತಿರು ವಂತಹ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಸದಸ್ಯನಾಗಿ ಭಾಗವಹಿಸುತ್ತಿರುವುದು ನನ್ನ ಸೌಭಾಗ್ಯ ಎಂದರು.

ಈ ಸಂದರ್ಭದಲ್ಲಿ ತಾಲೂಕಿನ ಕೃಷಿ ಅಧಿಕಾರಿ ಚನ್ನಪ್ಪ ವಲಯದ ಮೇಲ್ವಿಚಾರಕರಾದ ರಾಘವೇಂದ್ರ ಸ್ಥಳೀಯ ಸೇವಾ ಪ್ರತಿನಿಧಿಯಾದ ಮಂಜುಳಾ, ಗಂಗಾ ಸ್ವ ಸಹಾಯ ಸಂಘದ ಪಾಲುದಾರ ಸದಸ್ಯರು ಭಾಗವಹಿಸಿದ್ದರು.

**ವರದಿ ಅಂಬರೀಶ್ ನಾಯಕ್**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618